ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರೇ : ಪ್ರಸ್ತಾವ ಹೀಗಿದೆ : "1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು".

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಮಂಡನೆಗೆ ಅನುಮತಿಯನ್ನು ನೀಡಲಾಯಿತು.

SRI QUMARUL ISLAM:- We have not recieved the English version of the Bill. This is an important bill.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಮಾನ್ಯ ಅಧ್ಯಕ್ಷರೇ, 1990ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Annexure (1)

ಅಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಯಿತು.

MR. SPEAKER : The Hon'ble Minister for Rural Development ...

SRI D.B. CHANDRE GOWDA : Sir, I raise to oppose the introduction of the bill. ಏಕೆಂದರೆ ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 80 ಹೀಗಿದೆ :

"80 ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ : (1) ವಿಧೇಯಕವನ್ನು ಮಂಡಿಸುವ ಪ್ರಸ್ತಾವಕ್ಕೆ ಅನುಮತಿ ದೊರೆತ ನಂತರ ಪ್ರಸ್ತಾವದ ನಂತರ ಪ್ರಸ್ತಾವದ ಸಂಬಂಧದಲ್ಲಿ ವಿಧೇಯಕವನ್ನು ಮಂಡಿಸುವವನು, ಸಂಕ್ಷಿಪ್ತ ವಿವರಣಾತ್ಮಕ ವಿವರಣೆಯನ್ನು ನೀಡಬಹುದು. ಪ್ರಸ್ತಾವಕ್ಕೆ ವಿರೋಧ ಕಂಡುಬಂದಲ್ಲಿ, ಅದನ್ನು ವಿರೋಧಿಸುವ ಸದಸ್ಯನಿಗೆ ಸಂಕ್ಷಿಪ್ತ ವಿವರಣಾತ್ಮಕ ಹೇಳಿಕೆಯನ್ನು ನೀಡಲು ಹಾಗೂ ವಿಧೇಯಕವನ್ನು ಮಂಡಿಸಿದ ಸದಸ್ಯನಿಗೆ ಸಂಕ್ಷಿಪ್ತ ಉತ್ತರ ನೀಡಲು ಅನುಮತಿ ಕೊಡಬಹುದು. ಮತ್ತು ಆ ತರುವಾಯ ಯಾವುದೇ ಚರ್ಚೆಗೆ ಅವಕಾಶವಿಲ್ಲದೆ ಆ ಕುರಿತು ಪ್ರಶ್ನೆ "ಹಾಕತಕ್ಕದು." ಆದ್ದರಿಂದ I may please be permitted.

MR. SPEAKER : Is it after the introduction or before the introduction?

SRI D. B. CHANDRASHEKAR GOWDA : It is before the introduction. Once the Bill is introduced, it will come for voting. ಇದು ಬಹಳ ಮುಖ್ಯವಾದಂಥ ಒಂದು ತಿದ್ದುಪಡಿ ಮಸೂದೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ, ಈ ಶಾಸನವನ್ನು ರಿಪೀಲ್ ಮಾಡಿದ್ದೇವೆ ಎಂದು ಹೇಳಿದ್ದರೆ ಅದು ಅರ್ಥವತ್ತಾಗಿರುತ್ತಿತ್ತು. ಅದರ ಬದಲಾಗಿ ಸರಿಸುಮಾರು 70ಕ್ಕೂ ಹೆಚ್ಚು ತಿದ್ದುಪಡಿಗಳನ್ನು ಈ ಶಾಸನಕ್ಕೆ ಈ ಸದನದಲ್ಲಿ ತರತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಬದಲಾವಣೆಯಾಗುತ್ತಲೇ ಇದ್ದಾರೆ. ಯಾರು ಏನು ಮಾತು ಕೊಟ್ಟರು ಎಂಬುದು ಅವರ ನೆನಪಿನಲ್ಲಿ ಉಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಇಂಥ ಒಂದು ಮಹತ್ತರವಾದ ಮಸೂದೆಗೆ ತಿದ್ದುಪಡಿಯನ್ನು ತರತಕ್ಕ ಕಾಲದಲ್ಲಿ ಪ್ರತಿಪಕ್ಷಗಳನ್ನು ಕರೆದು ಮಾತನಾಡಿ ಚರ್ಚೆಸಿ, ಸಮಾಲೋಚನೆ ಮೂಲಕ ತರುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆ ಆಶ್ವಾಸನೆಯನ್ನು ಗಾಳಿಗೆ ತೂರಿ ಏಕಾಏಕಿ ಈ ಮಸೂದೆಯನ್ನು ಮಂಡಿಸತಕ್ಕಂಥ ಪ್ರಯತ್ನ ನಡೆದಿದೆ. ಇಲ್ಲಿ ಮುಖ್ಯವಾಗಿ ಇರತಕ್ಕದ್ದು ತಿದ್ದುಪಡಿ ಎಲ್ಲಿಂದ ಪ್ರಾರಂಭವಾಗಿದೆ ಎಂದರೆ, ನಾಮೆನ್‌ಕ್ಲೇಚರ್‌ನಿಂದಲೇ ಬದಲಾವಣೆಯಾಗುತ್ತದೆ. ನಾಮೆನ್‌ಕ್ಲೇಚರ್ ಆಫ್ ದಿ ಆಕ್ಟ್‌ನಲ್ಲೇ ಸ್ವೀಪಿಂಗ್ ಛೇಂಜಸ್ ಆಗಿದೆ. ಹಿಂದೆ ನಾನು ಶಾಸನಸಭಾ ಅಧ್ಯಕ್ಷನಾಗಿದ್ದಾಗ ಈ ಮಸೂದೆ ಮಂಡನೆ ಆಗಿ ತೀರ್ಮಾನವಾಯಿತು. ಹಾಗೆ ತೀರ್ಮಾನಕ್ಕೆ ಮುನ್ನ ಜಂಟೀ ಸಲಹಾ ಸಮಿತಿಗೆ ಸಹಾ ಈ ಮಸೂದೆ ಹೋಯಿತು. ನಂತರ ಅಲ್ಲಿ ಮಾಡಿರತಕ್ಕ ಕೆಲವು ಶಿಫಾರಸ್ಸುಗಳು ಏನಿವೆ, ಅವುಗಳ ವಿರುದ್ಧ ಈ ಶಾಸನವನ್ನು ತಂದಿದ್ದಾರೆ. ಜಂಟಿ ಸಲಹಾ ಸಮಿತಿ ಸುಮಾರು 29 ಸಾರಿ ಸಭೆ ಸೇರಿ ನಿರ್ಣಯಗಳನ್ನು ಮಾಡಿರತಕ್ಕ ಒಂದು ಮಹತ್ತರವಾದ ಬದಲಾವಣೆ. ಇದು ಕರ್ನಾಟಕದ ಶಾಸನವನ್ನು ಇಲ್ಲಿ ಮಾತ್ರವಲ್ಲ. ರಾಷ್ಟ್ರದ ವಿಭಿನ್ನ ಭಾಗದಲ್ಲಿ ಮಾತ್ರ ಅಲ್ಲ, ರಾಷ್ಟ್ರದ ಹೊರಗೂ ಕೂಡಾ ಚರ್ಚೆ ಮಾಡಿ ಇದರ ಬಗ್ಗೆ ಒಳ್ಳೆಯ ಮಾತನ್ನು ಕೆಲವರು ಆಡಿದ್ದಾರೆ. ಹಿಂದಿನ ಪ್ರಧಾನಮಂತ್ರಿಗಳಾದ ರಾಜೀವ್ ಗಾಂಧಿಯವರೂ ಕೂಡಾ

ಈ ಮಸೂದೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಆ ವಿಚಾರಕ್ಕೆ ನಾನು ಆ ನಂತರ ಬರುತ್ತೇನೆ. ಈಗ ಮುಖ್ಯವಾಗಿರತಕ್ಕ ಪ್ರಶ್ನೆ, ಶಾಸಕರಿಗಾಗಿ ...

SRI. B. BASAVALINGAPPA : Sir, before introducing the Bill, the Hon-member is going into merits and demerits and contents of the Bill, I think it is premature. At the time of consideration of the Bill, the hon. member can participate.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ, ಅವರು ಮೊದಲು ಮಂಡನೆಗೆ ಸಭೆಯ ಅನುಮತಿಯನ್ನು ಕೇಳಲಿ. ಆನಂತರ ನಾನು ಪ್ರಸ್ತಾವವನ್ನು ಸದನದಲ್ಲಿ ಓಟಿಗೆ ಹಾಕುವುದಕ್ಕಿಂತ ಮುಂಚೆ ನಾನು ತಮಗೆ ಅವಕಾಶವನ್ನು ಕೊಡುತ್ತೇನೆ.

SRI D.B. CHANDRE GOWDA : That is why under Rule 80 of the Rules of Procedure and Conduct of Business I have taken preliminary objection for the intrdocution of the motion itself. I take objection for introduction itself.

MR. SPEAKER : Unless the House consents for leave to introduce the Bill ...

SRI D.B. CHANDRE GOWDA : On the motion of leave to introduce a Bill, the mover may make a brief explanatory statement. If the motion is opposed, the Speaker may permit a brief explanatory statement from the member who opposes. This is rule 80 of the Rules of Procedure. My objection is for the introduction itself. Here, leave to introdcue the Bill is the motion. I am opposing that motion. The Speaker may permit a brief explanatory statement.

MR. SPEAKER : Has the motion for leave, been made?

SRI D.B. CHANDRE GOWDA: No

MR. SPEAKER : You get your chance or get your right only after the motion is made. Then you will come into the picture.

SRI D.B. CHANDRE GOWDA : Once the motion is moved, it becomes the property of the House. I have no option but to go into the merits and demerits of the Bill. But may I remind, in Punjab, once on the same question when the motion was moved ...

MR. SPEAKER : In a vacuum you cannot oppose anything.

SRI D.B. CHANDRE GOWDA : You have called the Minister. Let me explain my position.

ಅಧ್ಯಕ್ಷರು: ಹೇಳಿ.

SRI D.B. CHANDRE GOWDA : Sir, you have called the concerned Minister to move the motion. This is the stage. So, there is no vacum. You have permitted the Minister to move the motion. I oppose the moving of the motion under rule 80. This is the stage. So, there is no vacum.

SRI CHINNAPPA: You cannot anticipate what is going on in the House. Let the House know what it is.

SRI D.B. CHANDRE GOWDA: So Sir, my submission is this. You have permitted the Minister to move the motion. My objection is, before moving, I have every right to make the submission with your permission. That is all my point Sir, So, there is no motion.

ಅಧ್ಯಕ್ಷರೇ : ಮಾನ್ಯ ಬಸವಲಿಂಗಪ್ಪನವರೆ, ನೀವು ಏನಾದರು, ಈ ಬಗ್ಗೆ ಹೇಳಿದಿದ್ದರೆ ನಾನು ಮಾನ್ಯ ದಯಾನಂದರಾವ್‌ರವರನ್ನು ಕರೆಯಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ವಾಕ್ಯಂ ಎಂದು

ಏನು ಹೇಳುತ್ತೇವೆ, ಆ ಶೂನ್ಯದಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಮೋಷನ್ ಮೂವ್ ಮಾಡಿದ ಮೇಲೆ ಸಭೆಯ ಅನುಮತಿ ತೆಗೆದುಕೊಂಡ ಮೇಲೆ ನಾನು ಪುನಃ ಕನ್ಸಿಡರೇಷನ್‌ಗೆ ಪುನಃ ತೆಗೆದುಕೊಂಡಾಗ ಏನು ಬೇಕಾದರೂ ಹೇಳಲಿ. ನಾನು ಅನುಮೋದನೆಗೆ ಮಾತ್ರ ಈ ಸಭೆಯ ಮುಂದೆ ಇಡಲಿಕ್ಕೆ ಹೊರಟಿದ್ದೇನೆ. ಈಗ ಮಂಡನೆ ಆಗಲಿ ಪುನಃ ಕನ್ಸಿಡರೇಷನ್‌ಗೆ ತೆಗೆದುಕೊಂಡಾಗ ತಾವು ಏನು ಬೇಕಾದರೂ ಮಾತನಾಡಿ ನಮ್ಮ ಆಭ್ಯಂತರವಿಲ್ಲ. ಒಂದು ದಿವಸ ಎರಡು ದಿವಸ ಮೂರು ದಿವಸ ಮಾತನಾಡಿ. ನಾನು ಮೂವ್ ಮಾಡುವುದಕ್ಕೆ ಮೊದಲೇ ವಿರೋಧ ಮಾಡುವುದು ಸರಿಯಲ್ಲವೆಂದು ನಾನು ಕಾನೂನು ಬದ್ಧವಾಗಿ ಹೇಳುತ್ತಿದ್ದೇನೆ.

SIR. M.V. VENKATAPPA : Sir, rule 80 of the Rules of Procedure says: (1) On the motion for leave to introduce a Bill, the mover may make a breif explanatory statement. If the motion is opposed, the Speaker may permit a brief explanatory statement from the member who opposes and a brief reply from the mover, and shall then without further debate put the question there on.

So, let the Hon'ble Minister make a brief explanatory statement.

MR. SPEAKER : How can I withdraw the permission to introduce? I don' have such a right.

SRI D.B. CHANDRE GOWDA: You have asked the concerned Minister to introduce the Amendment Bill for the Zilla Parishad and Panchayat Raj Act. It is at that stage we are opposing. Once the bill is introduced, of course, it is debated and voted. That is the second stage and voting would be final stage. So, my submission is, I have an objection to the very introduction itself because of certain basic issues involved.

ಶ್ರೀ ಬಿ. ಬಸವಲಿಂಗಪ್ಪ: ಒಪ್ಪಿಗೆಗೋಸ್ಕರ ಸಭೆಯ ಮುಂದಿಡುತ್ತಿದ್ದೇನೆ. ಆದರ ನಂತರ ಮಂಡನೆ ಮಾಡುತ್ತೇನೆ.

Mr. Speaker : The Bill is deemed to be introduced only after the House give permission of leave of such introduction. Till then there cannot be introduction

Sri D.B. Chandre Gowda : I was trying to make a case. At page 467 of the Practice and Produce of Parliament it says:

> "A Minister, who desires to introduce a Bill, has to give seven days' notice in writing of his intention to move for leave to introduce the Bill ...

The basic question here is once the Hon'ble Speaker permits the Minister to introduce the bill, then I have no place. This is the point. Further it reads,

> "The Speaker, may, however, allow the motion for leave to introduce to be made at a shorter notice".

Now, the question is the Hon'ble Minister should have asked the Speaker's permission to introduce the bill at a shorter notice. My submission is this. This is not a small change. They are making sweeping changes including the nomenclature of the Act. So, in one sentence they could have said that the Act is repealed. So, that was the stage at which I stood up to make my submission. Let them not under the impression that the prior permission of the Speaker is taken for granted. Let us not go by that procedure. This is the first thing. Therefore, I said once the Hon'ble Minister is permitted, of course, his intention may be good...

MR. SPEAKER : He is seeking leave of the House to introduce the bill. We are at that stage :

SRI D.B. CHANDRE GOWDA : Here the Minister desires to introduce the bill. It is the first stage i.e., leave to introduce the bill. The second stage is Hon'ble Speaker has to give permission and the House has to give permission. The third stage is the introduction stage, certain formalities have to be followed. First formality is there should be minimum seven days notice. The second question is, the Minister if he could not give seven days notice prior to introduction he should sufficiently explain as to why he was not in a position to give seven days notice and then seek permission of the Chair for the introduction. If the Chair permits not in this callous way,... ಇದು ತಮ್ಮ ಕಾಲದಲ್ಲಿ ಆಗಬಾರದು ಎನ್ನುವ ದೃಷ್ಟಿಯಿಂದ ಹೇಳಿದೆ. ಇದರ ಇಂಟ್ರೊಡಕ್ಷನ್‌ಗೆ ನನ್ನ ವಿರೋಧ ಇದೆ.

SRI K.H. RANGANATH: I would like the Leader of the Opposition to go through sub-rule (2) of rule 74 of Rules of Procedure. It says "(2) The period of notice of a motion for leave to intreoduce bill under this rule shall be seven clear days unless the Speaker allows the motion to be made at shorter notice". Here the objection of 'seven clear days notice – it is waived.

SRI D.B. CHANDRE GOWDA : First we are concerned with leave to introduce. Rule 74 is very clear. I have already explained this position. My further submission is now the bill is in your court. If you think that such and such a bill could be introduced in the House in such a callous way or fashion I have no objection. I leave it to your discretion. ಹಿಂದಿನ ಶಾಸನಸಭೆಯೊಳಗೆ ಒಂದು ದಿನ, ಎರಡು ದಿನ, ಒಂದು ತಿಂಗಳು, ಎರಡು ತಿಂಗಳು ಅಲ್ಲ, ಚರ್ಚೆಯ ಮೇಲೆ ಚರ್ಚೆ ನಡೆದು, ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋಗಿ, ಅಲ್ಲಿಂದ ಬಂದಿರತಕ್ಕ ವರದಿಯನ್ನು ತರಿಸಿಕೊಂಡು ಈ ಶಾಸನಸಭೆಯಲ್ಲಿ ಯುನಾನಿಮಸ್ಲಿ ಒಂದು ಮಸೂದೆ ಮಂಡನೆ ಆಗಿ ನಂತರ, ಕಾನೂನು ಆದರೆ, ಅಂತಹ ಕಾನೂನನ್ನು ...

ಶ್ರೀ ಪಿ. ಬಸವರಾಜ್ : ಹಿಂದಿನ ಸಭೆಯಲ್ಲಿ ಚರ್ಚೆಯಾಗಿ ಮಸೂದೆ ಪಾಸಾಗಿದೆ ಎಂದು ತಾವೇ ಹೇಳುತ್ತೀರಿ. ಅದೇರೀತಿ ಈ ಮಸೂದೆ ಬಗ್ಗೆ ಕೂಡ ಚರ್ಚೆ ಮಾಡುವುದಕ್ಕೆ ತೊಂದರೆ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ಪಂಚಾಯ್ತಿಯಲ್ಲಿ ಇಲ್ಲವೇ ಮಂಡಲ ಆದರೆ ಮಾಡಬಹುದು. ಆದರೆ ಇದು ಶಾಸನ ಸಭೆ. ನಿಯಮಗಳ ಪ್ರಕಾರ ಹೋಗಬೇಕಾಗುತ್ತದೆ, ಅದಕ್ಕಾಗಿಯೇ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನಿಯಮಗಳನ್ನು ಮೀರಿ ಹೋಗುವುದಕ್ಕೆ ಯಾರಿಗೂ ಅವಕಾಶ ಇಲ್ಲ. ಚರ್ಚೆಗೆ ನಾನು ಸಿದ್ಧನಿದ್ದೇನೆ, ಚರ್ಚೆ ಮಾಡೋಣ, ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡೋಣ. ಆದರೆ, ಚರ್ಚೆ ಮಾಡುವಾಗ ನಿಯಮಗಳ ವ್ಯಾಪ್ತಿಯನ್ನು ಬಿಟ್ಟು ಇಂತಹ ಒಂದು ಶಾಸನವನ್ನು ಚರ್ಚೆ ಮಾಡುವುದಕ್ಕೆ ಹೋಗಬಾರದು ಎಂದು ನನ್ನ ಅಭಿಪ್ರಾಯ. ಜೊತೆಗೆ, ತಮ್ಮ ಗಮನಕ್ಕೆ ಇನ್ನೊಂದು ಅಂಶವನ್ನು ತರಬೇಕು. ಮಾನ್ಯ ಅಧ್ಯಕ್ಷರೇ, ತಾವು ತರಿಸಿ ನೋಡಿ, ಪಂಜಾಬ್ ಶಾಸನಸಭೆಯ ನಡಾವಳಿಯನ್ನು ತಾವು ತರಿಸಿ ನೋಡಬೇಕು. ನೀವು ಪಂಜಾಬನ್ನು ಅನುಸರಿಸುತ್ತೀರಿ, ಅದು ಬೇರೆ. ನೀವು ಈಗ ಮಾಡಿದ್ದೀರಲ್ಲ, ಅಲ್ಲಿ ನಡೆಯುತ್ತಿರತಕ್ಕ ನಡಾವಳಿ ...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ತಾವು ಈಗ ಪಂಜಾಬನ್ನು ತೃಪ್ತಿಪಡಿಸುತ್ತಿದ್ದೀರಿ ...

ಅಧ್ಯಕ್ಷರು : ಪಂಜಾಬ್ ಶಾಸನ ಸಭೆಯಲ್ಲಿ ಏನು ನಡೆಯಿತು ...

SRI D.B. CHANDRE GOWDA: At the stage of introduction, the whole House was dissolved. The Government fell, if I am correct.

ಅಧ್ಯಕ್ಷರು : ಅದನ್ನು ಅನುಸರಿಸಿ ಎಂದು ಅವರಿಗೆ ಹೇಳುತ್ತಿರಾ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅನುಸರಿಸುತ್ತೇನೆ. ಅವರು ಪಂಜಾಬನ್ನು ಅನುಸರಿಸುತ್ತಾರೆ. ಇಲ್ಲಿ ಬಹಳ ಮುಖ್ಯವಾಗಿ ರಾಜ್ಯಾಂಗದ 64ನೇ ತಿದ್ದುಪಡಿ ರಾಜ್ಯ ಸಭೆಯಲ್ಲಿ ಮಂಡನೆಯಾಗಿ, ಮಸೂದೆ ಆಗುವುದಕ್ಕೆ ಮುಂಚೆಯೇ ತಿದ್ದುಪಡಿ ಆಗದೇ ಬಿದ್ದುಹೋಯಿತು. ಅದಕ್ಕೂ ಇಂತಾದ್ದೇ ಕಾರಣ. ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಯಾವರೀತಿಯಾಗಿ ಇರಬೇಕು ಎಂದು ಹೇಳಿ ನಾನು ಮಾಡಿದ ಶಾಸನ ಅಲ್ಲ, ಕೇಂದ್ರದವರು ಮಾಡಿದು ಆದ್ದರಿಂದ ಇಂತಹ ಮಸೂದೆ ಮಂಡನೆ ಮಾಡುವಾಗ ...

SRI B. BASAVALINGAPPA : Mr. Speaker, Sir, the Hon'ble Leader of the Opposition is going to the merits of the case even before seeking permission to introduce the bill. If they want to discuss on merits, it is not correct. Please don't try to creat precedent ...

SRI. D.B. CHANDRE GOWDA : I am only trying to analyse for the benefit of the Hon'ble Minister. There are Ministers who think that they are above rule.

MR. SPEAKER : I am seeking guidance. You may enlighten me. You can try to convince me.

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತಿನ ಈ ಚರ್ಚೆಯ ವಸ್ತು ರಾಜ್ಯದ ವ್ಯವಸ್ಥೆಯನ್ನು ಬದಲಾವಣೆ ಮಾಡುತ್ತದೆ. ಇಂಥಾದ್ದಕ್ಕೆ ನೋಟೀಸ್ ಬೇಡವೇ? ನಾವು ಸಿದ್ಧರಾಗುವುದು ಬೇಡವೇ? ಇಂಥಾದ್ದನ್ನು ಶಾಸನಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಕಾಲ ಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಇಂಟ್ರಡಕ್ಷನ್ ಬಗ್ಗೆ ನನ್ನ ವಿರೋಧ ಇದೆ. 7 ದಿವಸ ಮುಂಚೆ ನೋಟೀಸ್ ಕೊಡಬೇಕೆಂದು ಇದ್ದರೆ, ಆದರ ಜೊತೆಯಲ್ಲಿಯೇ ಕಾಪಿ ಆಫ್ ಅಮೆಂಡ್‌ಮೆಂಟ್ಸ್, ಬಿಲ್ಸ್ ತರಬೇಕಾಗುತ್ತದೆ. So that the Members would have time to go through the bill and then express their opinion on that. At the time of introduction, we don't find time. We don't know why so hurriedly this bill is being pushed through. This is what we exactly say the Ministers style of functioning. ತಾವು ಮಿನಿಸ್ಟರಿಗೆ ಒಂದು ಮಾತು ಹೇಳಿದರೆ ಸಾಕು.

ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈಗ ತಾನೇ ಹೇಳಿದರು. ಪಾರ್ಲಿಮೆಂಟರಿ ಪ್ರಾಕ್ಟೀಸ್ ಆಂಡ್ ಪ್ರೊಸೀಜರ್‌ನಲ್ಲಿ ಇರುವಂತೆ ಪುಟ 469ರಲ್ಲಿ ಲಾಸ್ಟ್ ಪ್ಯಾರಾದಲ್ಲಿ ಈ ರೀತಿ ಇದೆ :

'By convention, the motion for introduction is not opposed, but there have been occasions when motions for introduction of Government bills were opposed in the House. The member who wishes to oppose must write in advance (before the commencement of the sitting) to the Secretary-General and if two or more members write, the Speaker calls the Member whose intimation was received first in point of time...

ಮೊದಲೇ ತಾವು ಇದನ್ನು ಆಪೋಜ್ ಮಾಡಿ ಒಂದು ಪತ್ರವನ್ನು ಸೆಕ್ರೆಟರಿ ಜನರಲ್‌ರವರಿಗೆ ಬರೆಯಬೇಕಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಪತ್ರ ಬರೆದಿಲ್ಲ ಎಂದು ತಾವು ತಿಳಿದುಕೊಂಡಿದ್ದೀರೇನು? ನಾವು ಪತ್ರ ಬರೆದಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ : ಬರೆದಿದ್ದರೆ ಸಂತೋಷ. ಆಮೇಲೆ ಎರಡನೆಯದಾಗಿ ಪುಟ 468ರ ಮೂರನೇ ಪ್ಯಾರಾದಲ್ಲಿ ಈ ರೀತಿ ಇದೆ. ಮೊದಲ ಎರಡು ಮೂರು ಲೈನ್ ಬಿಡಿ. ಅದರಲ್ಲಿ ಮನಿ ಬಿಲ್ಸ್ ಸಿಕ್ರೇಟ್ ಬಿಲ್ಸ್ ಏನಿದೆ, ಅದಕ್ಕೆ ಅಧ್ಯಕ್ಷರು ಮೊದಲೇ ಪರ್ಮಿಟ್ ಮಾಡಬಹುದೆಂದು ಇದೆ :

"In the case of other bills, if the Minister concerned gives adequate reasons in a memorandum for consideration of the Speaker as to why the Bill is proposed to be introduced without copies being made available to Members, the Speaker may permit introduction of the bill without prior circulation or after circulation for a shorter period"

ಅವರು 7 ದಿವಸಗಳ ಸಮಯ ಕೊಡಬೇಕಾಗಿತ್ತು ಎಂದು ಹೇಳಿದರು. ಆದರೆ ಇದರ ಒಂದು ಆಧಾರದ ಮೇಲೆ ತಾವು ಮುಂಡನೆಗೆ ಅವಕಾಶ ಕೊಡಬಹುದು ಎಂದು ನನ್ನ ಅನಿಸಿಕೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಅನುಭವ ಅವರು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ...

MR. SPEAKER : Mr. Ramakrishna Hegde like to say something.

SRI. BASAVALINGAPPA : He was the author of the Act. We will hear him.

SRI. RAMAKRISHNA HEGDE : If I am the author of this Act, you have the honour of the co-author. You might have changed your view. ಮಾನ್ಯ ಅಧ್ಯಕ್ಷರೇ, ರೂಲ್ 80ರ ವ್ಯಾಖ್ಯೆ ವಿಚಾರದಲ್ಲಿ ಇದು ಚರ್ಚೆಯಾಗುತ್ತಿದೆ ಎಂದು ನನ್ನ ಭಾವನೆ.

It reads :

> 'On the motion for leave to introduce a Bill, the mover may make a brief explanatory statement, the motion is opposed, the Speaker may permit a brief explanatory statement from the member who opposes and a brief reply from the mover, and shall then without further debate put the question thereon'

Now, shall we take it that the motion is being made seeking leave of this House to introduce the bill? If that is the position, then any Member of this House is within his right to raise any objection. Whether the objection is overruled or upheld, it is a different question ...

ನನ್ನ ಒಂದು ಅತ್ಯಂತ ಸವಿನಯ ವಿನಂತಿ ಮಾನ್ಯ ಮಂತ್ರಿಗಳಲ್ಲಿ ಏನೆಂದರೆ, ಈಗ ಇರತಕ್ಕಂಥ ಕಾಯ್ದೆಯಲ್ಲಿ ಬದಲಾವಣೆ ಮಾಡತಕ್ಕಂಥ ಅಭಿಪ್ರಾಯ ಇದ್ದರೆ, ಬದಲಾವಣೆ ಮಾಡತಕ್ಕಂಥ ಹಕ್ಕು ನಿಮಗೆ ಇದೆ, ಮಾಡಬಹುದು; ಆದರೆ ಈಗ ಇರತಕ್ಕಂಥ ಕಾಯ್ದೆ ಬದಲಾವಣೆ ಒಂದು ಕಲಂ ಎರಡು ಕಲಂ ಬದಲಾವಣೆ ಅಲ್ಲ; ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈ ಒಂದು ಕಾಯ್ದೆ ಮಾಡಲಿಕ್ಕೆ ನಾವು ಸುಮಾರು ಒಂದೂವರೆ ವರ್ಷವನ್ನು ತೆಗೆದುಕೊಂಡಿದ್ದೇವೆ. ಈ ಕಾಯ್ದೆ ಮಾಡುವುದಕ್ಕಿಂತ ಮೊದಲು ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಕರೆದು ಚರ್ಚೆ ಮಾಡಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಿ ಅವರ ಅಭಿಪ್ರಾಯದ ಪ್ರಕಾರ ಮಾಡಿದ್ದೇವೆ. ತದನಂತರ ಈ ಕಾಯಿದೆ ಒಮ್ಮತದಿಂದ ಪಾಸ್ ಆಯಿತು. ಈ ಕಾಯಿದೆಯಲ್ಲಿ ದೋಷ ಇರಬಹುದು. ಯಾವುದೇ ಕಾಯಿದೆಯಲ್ಲಿ ನಾವು ದೋಷ ಕಂಡು ಹಿಡಿಯಬಹುದು. ಯಾವ ಕಾಯಿದೆಯೂ ಪರಿಪೂರ್ಣವಾಗಿರತಕ್ಕದ್ದು ಸಾಧ್ಯವಿಲ್ಲ. ಈ ಕಾಯಿದೆ ಪಾಸ್ ಆದಮೇಲೆ ಈ ಕಾನೂನನ್ನು ಜಾರಿಯಲ್ಲಿ ತಂದ ಮೇಲೆ ಕೇವಲ ಈ ದೇಶದಲ್ಲೇ ಅಲ್ಲ, ಬೇರೆ ದೇಶದಲ್ಲೂ ಕೂಡಾ ಒಂದು ಹೊಸ ಪ್ರಯೋಗ ಕರ್ನಾಟಕದಲ್ಲಿ ನಡೆಯುತ್ತಿದೆಯೆಂದು ಈ ಪ್ರಯೋಗವನ್ನು ಕುತೂಹಲದಿಂದ ಬೇರೆಯವರು, ಪತ್ರಿಕಾ ಪ್ರತಿನಿಧಿಗಳು ಮತ್ತು ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ಪ್ರೊಫೆಸರ್‌ಗಳು ಮೊದಲಾದವರು ಬಂದು ಇಲ್ಲಿ ನೋಡಿದರು. ಕೇವಲ 4 ದಿನಗಳ ಹಿಂದೆ ಮಹಾರಾಷ್ಟ್ರದಿಂದ, ಅಲ್ಲಿನ ಒಂದು ಶಾಸಕರ ತಂಡ ಬಂದು, ಅವರು ಕಾಂಗ್ರೆಸ್ ಪಕ್ಷದ ಶಾಸಕರು. ಇಲ್ಲಿ ಯಾವ ರೀತಿ ಕಾರ್ಯಕ್ಷೇತ್ರದಲ್ಲಿ ನಡೆಯುತ್ತಿದೆಯೆಂದು ನೋಡಿ ಮೆಚ್ಚಿ ಹೋಗಿದ್ದಾರೆ. ನಾನು ಇದರ ಮೆರಿಟ್ ಮೇಲೆ ಮಾತನಾಡುತ್ತಿಲ್ಲ. ಆದರೆ ನಾನು ತಮಗೆ ಮಾಡುವ ವಿನಂತಿ ಇಷ್ಟೇ, ಒಂದು ಕಾಯಿದೆಯನ್ನು ಜಾರಿಯಲ್ಲಿ ತಂದು ಆ ಪ್ರಯೋಗ ನಡೆಯುತ್ತಿರುವಾಗಲೇ ಅದನ್ನು ಅಮೂಲಾಗ್ರವಾಗಿ ಬದಲಾಯಿಸುವ ನಿಮ್ಮ ಉದ್ದೇಶ ಇದ್ದರೆ, ಅದನ್ನು ಇಷ್ಟು ಅವಸರದಲ್ಲಿ ಮಾಡಬೇಡಿ ಅಷ್ಟೇ. ಫೈನಾನ್ಸ್ ಬಿಲ್ ಆಗಿದ್ದರೆ ನಾಳೆ ಮಾರ್ಚ್ 31 ಮುಗಿದುಬಿಡುತ್ತದೆ, ಅಷ್ಟರೊಳಗೆ ಅವಸರವಾಗಿ ಮಾಡಬೇಕು ಎನ್ನಬಹುದಾಗಿತ್ತು. ಫೈನಾನ್ಸ್ ಬಿಲನ್ನು ಪಾಸ್ ಮಾಡುವಾಗ ಸ್ಪೀಕರ್ ಸಾಹೇಬರಿಗೆ ವಿಶೇಷವಾದ ಅಧಿಕಾರ ಇರುತ್ತದೆ. ಯಾವುದೇ ಕಾಪಿಯನ್ನು ಸದಸ್ಯರುಗಳಿಗೆ ಹಂಚದೆ ಅದನ್ನು ಪಾಸ್ ಮಾಡಿಕೊಳ್ಳಬಹುದು. ಆದರೆ ಈ ಮಸೂದೆಗೆ ಅಂತಹ ಅವಸರದ ಪ್ರಸಂಗ ಇಲ್ಲ. ಈ ವಿಷಯ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆಯಾಗಿದೆಯೇ ಎಂದು ನನ್ನ

ಸಹೋದ್ಯೋಗಿಗಳನ್ನು ಕೇಳಿದ್ದೇನೆ. ಕನಿಷ್ಟಪಕ್ಷ ಇದು ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಾದರೂ ಚರ್ಚೆಯಾಗಬೇಕಾಗಿತ್ತು. ಈ ಸೆಷನ್ ಒಳಗೆ ಇದನ್ನು ಪಾಸ್ ಮಾಡದೇ ಇದ್ದರೆ ದೊಡ್ಡ ಅನಾಹುತವಾಗುತ್ತದೆ ಎನ್ನುವ ಪರಿಸ್ಥಿತಿ ಇದ್ದರೆ ಪಾಸ್ ಮಾಡಬಹುದು. ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಬಂದು ಇನ್ನೂ 5 ವರ್ಷ ಕೂಡಾ ಪೂರ್ತಿ ಆಗಿಲ್ಲ. ಅದು ಪೂರ್ತಿ ಆಗುವವರೆಗೆ ನೀವು ಕಾದು ನೋಡಿ. ಅದರ ನಂತರ ಈ ಪ್ರಯೋಗ ವಿಫಲವಾಯಿತು, ಅಥವಾ ಸೊಟ್ಟುತಹ ಅಧಿಕಾರದ ದುರುಪಯೋಗವಾಯಿತು, ಜನರಿಗೆ ತಮ್ಮ ಅಭಿವೃದ್ಧಿ ಕೆಲಸ ಮಾಡತಕ್ಕಂಥ ವಿಚಾರದಲ್ಲಿ ಅಧಿಕಾರ ಕೊಡುವುದು ಸರಿಯಲ್ಲ ಎನ್ನುವುದು ನಿಮ್ಮ ಅಭಿಪ್ರಾಯ ಆಗಿದ್ದರೆ ಆವಾಗ ಇದನ್ನು ರದ್ದು ಮಾಡಬಹುದು. ಆದುದರಿಂದ ಇದು ಟೆಕ್ನಿಕಲ್ ದೃಷ್ಟಿಯಿಂದಲೂ ಕೂಡಾ ತಾವು ಇಂಟ್ರಡ್ಯೂಸ್ ಮಾಡತಕ್ಕಂತಾದ್ದು ಸರಿಯಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಒಂದು ವೇಳೆ ನೀವು ಇದರ ಬಗ್ಗೆ ಅಭಿಪ್ರಾಯ ಬೇಕೆಂದರೆ, ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆಯಿರಿ. ನಾಳೆ ಬೇಕಾದರೆ ಕರೆಯಿರಿ, ಮುಂದಿನವಾರ ಬೇಕಾದರೆ ಕರೆಯಿರಿ. ಎಲ್ಲರನ್ನೂ ಕರೆದು, ನಾವು ಈ ತರಹ ಬದಲಾವಣೆ ಮಾಡಬೇಕೆಂದಿದ್ದೇವೆ, ನಿಮ್ಮ ಅಭಿಪ್ರಾಯ ಇದರ ಬಗ್ಗೆ ಏನು ಎಂದು ಕೇಳಿ. ಇದನ್ನು ಅವಸರವಸರವಾಗಿ ಏಳು ದಿವಸಗಳ ಮುಂಚೆಯೂ ಸಹಾ ನೋಟೀಸ್ ಇಲ್ಲದ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಕೂಡಾ ಮಾಡದೆ ಮಂಡಿಸುವುದು ಸರಿಯಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರಲ್ಲಿ ಮುಂದೆ ಮಾನ್ಯ ಅಧ್ಯಕ್ಷರೇ, If the motion is opposed, the Speaker may permit a brief explanatory statement from the Member who opposes; whether one member or several members, they have to be given an opportunity to express their views. Why they want to oppose the motion or seeking the leave of the House to introduce, they will tell the House. ಅದಕ್ಕಾಗಿ ಈ ಕಡೆ ಇರತಕ್ಕಂಥ ಅನೇಕ ಸದಸ್ಯರಿಗೆ ತಮ್ಮ ಅಭಿಪ್ರಾಯವನ್ನು ಹೇಳತಕ್ಕಂಥ ಅವಕಾಶವನ್ನು ಕೊಡತಕ್ಕಂತಾದ್ರು ಆಗತ್ಯವೆಂದು ನನ್ನ ಅಭಿಪ್ರಾಯ. ಇಲ್ಲಿ ಅನೇಕ ಸದಸ್ಯರು ಅಲ್ಲಿ ಕೂತಂಥವರು ಕೂಡ ಅವರ ಮನಸ್ಸನ್ನು ನಾನು ತಿಳಿದುಕೊಂಡಿದ್ದರೆ, ಅವರಿಗೆ ಈಗ ಇರತಕ್ಕಂಥ ಕಾಯಿದೆ ಬಗ್ಗೆ ವಿರೋಧ ಇಲ್ಲ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:– ನಿಮ್ಮ ಮನೆ ಸರಿಯಾಗಿದ್ದರೆ ಏತಕ್ಕೆ ಇಲ್ಲಿಗೆ ಬರುತ್ತಿದ್ದಿರಿ.....

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ನಮಗೆ ಒಪ್ಪಿಗೆ ಇಲ್ಲ ...

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಫೋರ್ಡಯವರು ಇಲ್ಲಿ ಇಲ್ಲ ...

ಶ್ರೀ ಎನ್. ಚೆಕ್ಕೇಗೌಡ : ದೆಹಲಿಯಲ್ಲಿ ಹೋಯಿತು, ಈಗ ಬೆಂಗಳೂರಿಗೆ ಬಂದಿದ್ದಾರೆ.....

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ನಿಮ್ಮ ಅಭಿಪ್ರಾಯಕ್ಕೆ ವಿರೋಧ ಇದೆಯೇ ಹೊರತು ಕಾಯಿದೆಗೆ ಪೂರ್ಣ ಬೆಂಬಲ ಇದೆ.

ಶ್ರೀ ರಾಮಕೃಷ್ಣ ಹೆಗಡೆ : ನಾನು ಕೂಡ ಅದನ್ನೇ ಹೇಳುತ್ತಿದ್ದೆ. ಈಗ ಇರತಕ್ಕ ಕಾಯಿದೆ ಬಗ್ಗೆ ಹೇಳುತ್ತಿದ್ದೆ.

ಶ್ರೀ ಟಿ.ಎಂ. ಮಂಜುನಾಥ್ : ನಾವು ಹೊಸದಾಗಿ ಅಮೆಂಡ್‌ಮೆಂಟ್ ತರುತ್ತಿಲ್ಲ.

ಶ್ರೀ ರಾಕೃಮಷ್ಣ ಹೆಗಡೆ : ಮಾನ್ಯ ಬಸವಲಿಂಗಪ್ಪನವರು ಈ ಅಧಿಕಾರದ ವಿಕೇಂದ್ರೀಕರಣ ವಿಚಾರದಲ್ಲಿ ಅವರ ಅಭಿಪ್ರಾಯ ಪ್ರಪಂಚಕ್ಕೇ ಗೊತ್ತಿದೆ. ಅದನ್ನು ನೀವು ಕದ್ದು ಮುಚ್ಚೆ ಇಟ್ಟಿಲ್ಲ. ನೀವು ನಿಮ್ಮ ಅಭಿಪ್ರಾಯವನ್ನು ಸೌಮ್ಯವಾಗಿ ವ್ಯಕ್ತ ಮಾಡಿದ್ದೀರಿ. ಬಹಳಷ್ಟು ಪ್ರಖರವಾಗಿಯೇ ವ್ಯಕ್ತ ಮಾಡಿದ್ದೀರಿ. ನಿಮ್ಮ ಅಭಿಪ್ರಾಯ ಸ್ವಾತಂತ್ರ ನಿಮಗೆ ಇದೆ, ಅದೇ ರೀತಿ ನಮ್ಮ ಅಭಿಪ್ರಾಯ ಸ್ವಾತಂತ್ರ ನಮಗೆ ಇದೆ.

SRI KAGODU THIMMAPPA : They have taken an objection for the leave to introduce this Bill but now they are discussing on the merits of the Bill.

MR. SPEAKER : I am trying to understand from the Hon'ble Member the procedure which I have to adopt. I will ask your (Sri Kagodu Thimmappa's) enlightenment also after he finishes.

SRI KAGODU THIMMAPPA : He is going out of the way. If Senior Members were to argue at this stage on the details and merits and demerits of the bill, there is no point. It is a very simple question — Motion to leave the bill. If it is suffered from any constitutional disability, then, they can argue.

MR. SPEAKER : It is not a question to leave the bill. It is a question of a motion to seek the leave of the House to introduce the bill. It is to seek the permission of the House to introduce the bill. You are also equally a Senior Member. I will also seek your enlightenment.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ಹೇಳಿದ್ದು, ಈ ಹಂತದಲ್ಲಿ ಅವರು ಏನು ಮಾತನಾಡಿದ್ದಾರೆ.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕಾಗೋಡು ತಿಮ್ಮಪ್ಪ : ಹೇಳುವುದೆಲ್ಲಾ ಹೇಳಿ ಆಯಿತು. ಮಸೂದೆ ಮೇಲೆ ಏನು ಚರ್ಚೆ ಮಾಡಬೇಕಿತ್ತು, ಅದನ್ನು ಈಗಲೇ ಹೇಳಬೇಕು ಅಂತ ಅವರು ಇದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ : ಒಟ್ಟಿನಲ್ಲಿ ಈ ಮಸೂದೆಯನ್ನು ಮಂಡಿಸಲಿಕ್ಕೆ ಈ ಸದನದ ಪರವಾನಗಿಯನ್ನು ಕೇಳುವಂತಹ ಮೋಷನ್ ಏನು ಇಡುತ್ತಿದ್ದಾರೆ, ಆ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈಗಲೂ ಕೂಡ ನಾನು ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ನಂಬಿದ್ದೇನೆ; ಅವರು ಈ ಒಂದು ಸಮಂಜಸವಾದ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ ಎಂದು. ಇವೊತ್ತೇ ಇದನ್ನು ಮಂಡನೆ ಮಾಡುವಂತಾದ್ದು ಏನೂ ಇಲ್ಲ. ಇದರ ಬಗ್ಗೆ ಮೊದಲು ಚರ್ಚೆ ಆಗಲಿ. ವಿರೋಧ ಪಕ್ಷಗಳ, ಬೇರೆ ಬೇರೆ ಪಕ್ಷಗಳ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ಮಾಡಿ, ಜಿಲ್ಲಾ ಪರಿಷತ್ ಅಧ್ಯಕ್ಷರನ್ನೂ ಕರೆಸಿ ಚರ್ಚೆಮಾಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ : ಎಲ್ಲಾ ಅಧ್ಯಕ್ಷರನ್ನು ಕರೆಸಿ ಚರ್ಚೆ ಮಾಡಿ ಎಂದು ಹೇಳುವುದಿಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳು ಏನು ಇದ್ದಾರೆ, ಅವರನ್ನು ಕರೆಸಿ.

ಶ್ರೀ ರಾಮಕೃಷ್ಣ ಹೆಗಡೆ: ದಯಮಾಡಿ ಅವಸರ ಮಾಡಬೇಡಿ ಎಂದು ಹೇಳಿ ನಿಮ್ಮ ಹತ್ತಿರ ಪುನಃ ಪುನಃ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಕ್ಲಾರಿಫಿಕೇಶನ್ ಇದೆ. ಇಷ್ಟು ಹೇಳಿದಿರಿ, ಹೌಸ್‌ನಲ್ಲಿ ವ್ಯಾಕ್ಯೂಮ್ ಇದೆ, ಚರ್ಚೆಗೆ ಬರುವುದಿಲ್ಲ ಎಂದು. I am thankful to my senior colleague Mr. Venkatappa. By convention, motion for introduction is not opposed. But there have been occasions where motions for introduction of the Govt. bills are opposed in the House. Therefore, I am well within my rights to oppose the very introduction.

SRI BASAVALINGAPPA : You are opposing the vacuum.

SRI D. B. CHANDRE GOWDA : There is neither vacuum nor I am trying to plead a case which is not covered under the procedure.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ನಾನು ಸಾವಧಾನದಿಂದ ಅನುಭವಿಗಳಾದ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಹೆಗಡೆಯವರು ಮಾತಾಡಿದ್ದನ್ನು ಕೇಳಿದ್ದೇನೆ. ಹಾಗೆಯೇ ಚಂದ್ರೇಗೌಡರೂ ಹೇಳಿದ್ದನ್ನು ಕೇಳಿದ್ದೇನೆ. ಈಗ ತಿದ್ದುಪಡಿ ಮಂಡಿಸಲು ತಮ್ಮ ಅನುಮತಿ ಕೋರುತ್ತಿದ್ದೇನೆ. ಈ ಸಂಬಂಧದಲ್ಲಿ ಹೆಗಡೆಯವರು ಎಲ್ಲರನ್ನೂ ಕೇಳಬೇಕಾಗಿತ್ತು ಎಂದು ಹೇಳಿ ಹಾಗಾಗಿದ್ದರೆ ಬಹಳ ಚೆನ್ನಾಗಿತ್ತು ಎಂದರು. ಅವರ ಸಲಹೆ ಒಳ್ಳೆಯದು. ನಾನು ಎಲ್ಲಾ ಜಿಲ್ಲಾಧ್ಯಕ್ಷರನ್ನೂ ಕೇಳಿದ್ದೇನೆ. ಒಂದು ಸಲವಲ್ಲ, ಎರಡು ಸಲವಲ್ಲ ಮೂರು ಸಲ ಕೇಳಿದ್ದೇನೆ. ಈ ಒಂದು ಕಾಯಿದೆಯನ್ನು ಅನುಷ್ಠಾನಕ್ಕೆ ತಂದ ಶ್ರೀ ನಜೀರ್ ಸಾಬರು ಬಹಳ ಪ್ರಬುದ್ಧರು, ಇಂದು ಅವರು ನಮ್ಮ ಮಧ್ಯ ಇಲ್ಲ, ಸ್ಪಷ್ಟ ಭಾವನೆಗಳನಿಟ್ಟು ಕೊಂಡಿದ್ದ ದೊಡ್ಡ ನಾಯಕರು ಅವರು. ಅವರು ಈ ಕಾನೂನನ್ನು ಯಾವ ರೀತಿ ಜಾರಿಗೆ ಕೊಟ್ಟರು ಎಂದರೆ 70 ಅಮೆಂಡ್‌ಮೆಂಟ್‌ಗಳನ್ನು ಅವರೇ ಸಲಹೆ ಮಾಡಿದ್ದರು. ಅವರು ಮಾಡಬೇಕೆಂದಿದ್ದುದನ್ನು ಈಗ ನಾವು ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳೆಲ್ಲ ಅವರು ತರಬೇಕೆಂದಿದ್ದ ತಿದ್ದುಪಡಿಗಳಲ್ಲಿ ಅಡಕವಾಗಿದ್ದುವು. ಈ ತಿದ್ದುಪಡಿಗಳು ರಾಜ್ಯದ ಮುಂದೆ ಬಹಳ ದಿವಸಗಳಿಂದ

ಇದ್ದುವು. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ತಿದ್ದುಪಡಿ ತರುತ್ತಾರೆಂದು ಎಲ್ಲರಿಗೂ ಗೊತ್ತಿತ್ತು. ಆದರೆ ಈಗಾಗಲೇ 11 ತಿಂಗಳು ತಡವಾಗಿದೆ. ನಮ್ಮ ಪಕ್ಷದ ಸದಸ್ಯರು ನಿರಾಳವಾಗಿ, ಶಾಂತಿಯುತವಾಗಿ ಕಾದಿದ್ದಾರೆ. ಅವರ ಅಭಿಪ್ರಾಯವನ್ನೂ ತೆಗೆದುಕೊಂಡಿದ್ದೇವೆ. ಪತ್ರಿಕೆಗಳಲ್ಲೂ ಹಲವಾರು ಬಾರಿ ತಿದ್ದುಪಡಿಯ ಪರ ವಿರೋಧ ಪ್ರಕಟವಾಗಿದೆ. ಇಷ್ಟೆಲ್ಲದರ ಹಿನ್ನೆಲೆಯಲ್ಲಿ ಹಾಗೂ ನಮ್ಮ ಅನುಭವದ ಹಿನ್ನೆಲೆಯಲ್ಲಿ ಈ ರಾಜ್ಯಕ್ಕೆ ಯಾವುದು ಒಳ್ಳೆಯದಾಗಬೇಕು, ಬಡವರಿಗೆ ಯಾವುದು ಒಳ್ಳೆಯದಾಗಬೇಕು ಎಂಬ ಬಗ್ಗೆ ವಿಚಾರ ಮಾಡಿ ಇದನ್ನು ತಂದಿದ್ದೇವೆ. ಇದನ್ನು ಮಾನ್ಯ ಚಂದ್ರೇಗೌಡರು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿರುವ ಒಂದು ಮಾತು ಹೇಳಿದರು. ಅದರಲ್ಲೇ ಕೊನೆ ಪೇಜ್ ಓದಿದರೆ, ಅಧ್ಯಕ್ಷರಿಗೆ ಎಲ್ಲ ಅಧಿಕಾರ ಸೆಕ್ಷನ್ 74(2) ಪ್ರಕಾರ ಉಂಟು. ಈ ಹಂತದಲ್ಲಿ ವಾದ ವಿವಾದಕ್ಕೆ ಎಡೆ ಇಲ್ಲವೆಂದು ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದನ್ನು ವಿಚಾರ ಮಾಡಿ ತಂದಿದ್ದೇನೆ. ಈ ದೇಶಕ್ಕೆ ಯಾವುದು ಒಳ್ಳೆಯದಾಗಬೇಕೆಂಬ ಗುರಿಇಟ್ಟುಕೊಂಡು ತಂದಿದ್ದೇನೆ. ಈ ರಾಜ್ಯದ ಕ್ಷೇಮ ಕಾಪಾಡುವ ದೃಷ್ಟಿಯಿಂದ ತಂದಿದ್ದೇವೆ. ಈ ಕಾನೂನನ್ನು ಜಾರಿಗೆ ಕೊಟ್ಟು ನಜೀರ್ ಸಾಬರು ಒಂದು ಮಾತು ಹೇಳಿದ್ದರು, ಏನೆಂದರೆ, ಅವಸರ ಅವಸರವಾಗಿ ಈ ಕಾನೂನನ್ನು ಜಾರಿಗೆ ತಂದಿದ್ದೇನೆ, ಇದಕ್ಕೆ ಅಮೆಂಡ್‌ಮೆಂಟ್ಸ್ ತರಬೇಕಾಗಿದೆ; ಆದಷ್ಟು ಬೇಗ ನಾನೇ ಅದನ್ನು ತರುತ್ತೇನೆಂದು ಇದೇ ಸೀಟ್‌ನಲ್ಲಿ ಕೂತು ಅವರು ಹೇಳಿದ್ದಾರೆ. ಅದನ್ನು ಈಗ ನಾನು ತಂದಿದ್ದೇನೆ. ಬಹಳ ದಿನವಗಳ ನಂತರ ಇದನ್ನು ವಿಚಾರ ಮಾಡಿ ತಂದಿದ್ದೇವೆ ತಯಮಾಡಿ ತಾವು ಇದಕ್ಕೆ ಮನ್ನಣೆ ಕೊಡಬೇಕು. ರಾಜ್ಯದ ಹಿತದೃಷ್ಟಿಯಿಂದ ಯೋಚನೆ ಮಾಡಿ ಇದನ್ನು ತಂದಿದ್ದೇನೆ ರಾಜಕೀಯ ಪಕ್ಷದ ದೃಷ್ಟಿಯಿಂದ ವಿರೋಧ ಮಾಡುವುದು ಸರಿಯಲ್ಲ. ಕಾಂಗ್ರೆಸ್‌ನವರು ಆ ಕಡೆ ಕೂತಾಗ ಬಹಳ ಕಮ್ಮಿ ಸಂಖ್ಯೆಯಲ್ಲಿದ್ದವು. ಈಗ ವಿರೋಧ ಮಾಡದೆ ಎಚ್ಚರಿಕೆ ಕೊಟ್ಟವು. ಈ ರಾಜ್ಯಕ್ಕೆ ಇದರಿಂದ ಕ್ಷೇಮವಾಗುವುದಿಲ್ಲ ಎಂದು ಸಾವಿರ ಸಲ ಹೇಳಿದರೂ ನೀವು ಆಗ ನಮ್ಮ ಮಾತನ್ನು ಕೇಳಲಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಜಂಟಿ ಸಲಹಾ ಸಮಿತಿ ಮುಂದೆಯೂ ಇದು ಹೋಗಿ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ : ಆದ್ದರಿಂದ ದಯವಿಟ್ಟು ಅಧ್ಯಕ್ಷರು ಇದನ್ನು ಮಂಡಿಸಲು ಅನುಮತಿ ಕೊಡಬೇಕೆಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಎಲ್ಲ ವಿಚಾರಗಳನ್ನೂ ನಾನು ಕೇಳಿದ್ದೇನೆ. ಸಾಧಾರಣವಾಗಿ ಬೈ-ಕನ್‌ವೆನ್‌ಷನ್ ಈ ಒಂದು ಮಸೂದೆಯನ್ನು ಸದನದ ಅನುಮತಿಗೆ ಮಂಡಿಸುವ ಕಾಲದಲ್ಲಿ ಸಾಮಾನ್ಯವಾಗಿ ವಿರೋಧ ಮಾಡುವುದಿಲ್ಲ. ಆದರೆ ಮಸೂದೆ ಮಹತ್ವಪೂರ್ಣವಾಗಿದ್ದರೆ ಮತ್ತು ಅದಕ್ಕೆ ಮೂಲಭೂತವಾದ ರಿಸರ್ವೇಷನ್ಸ್, ಅದಕ್ಕೆ ಮೂಲ ಭೂತವಾದ ವಿರೋಧ ಇದ್ದರೆ ಅಂಥಾ ಸಮಯದಲ್ಲಿ ಮಸೂದೆಯನ್ನು ಮಂಡಿಸಲು ಅನುಮತಿ ಕೋರುವಾಗಲೇ ವಿರೋಧ ಮಾಡಬಹುದು ಎಂಬುದಕ್ಕೆ ನಮ್ಮ ರೂಲ್ಸ್‌ಗಳಲ್ಲಿ ಅವಕಾಶ ಮಾಡಿಕೊಡುತ್ತವೆ. ಆದರಂತೆ ನಾನು ಮಾನ್ಯ ಸಚಿವರನ್ನು ಕರೆಯುತ್ತಿದ್ದೇನೆ. ಈ ವಿಧೇಯಕವನ್ನು ಮಂಡಿಸಲು ಸದನದ ಅನುಮತಿಯನ್ನು ಕೋರುವುದಕ್ಕೆ.

ಶ್ರೀ ಬಿ. ಬಸವಲಿಂಗಪ್ಪ : ಅಧ್ಯಕ್ಷರೇ 1990ನೇ ಇಸವಿ ಕರ್ನಾಟಕದ ಜಿಲ್ಲಾಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್, ನ್ಯಾಯ ಪಂಚಾಯತ್ ಹಾಗೂ ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಈ ಮಸೂದೆ ಮಂಡನೆಗೆ ಸದನದ ಅನುಮತಿ ಕೊಡಬಾರದೆಂದು ವಿರೋಧಿಸುತ್ತ ಸಂಕ್ಷಿಪ್ತವಾದ ಹೇಳಿಕೆ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ಕೆಲವು ವಿಚಾರಗಳನ್ನು ಆಗಲೇ ಪ್ರಸ್ತಾಪ ಮಾಡಿದ್ದೇವೆ. ಇದೊಂದು ಪ್ರಯೋಗ. ಈ ಪ್ರಯೋಗ ಕೇವಲ ಮೂರೂವರೆ ವರ್ಷಗಳಷ್ಟು ತನ್ನ ಅನುಭವವನ್ನು ಈ ರಾಜ್ಯಕ್ಕೆ ಕೊಟ್ಟಿದೆ. ಇದರಲ್ಲಿ ಬಹಳ ಮುಖ್ಯವಾಗಿರುವ ಪ್ರಕ್ರಿಯೆಗಳು ಎರಡು. ಒಂದು, ಸಾಮಾನ್ಯ ಜನರು ತಮ್ಮ ಸಣ್ಣಪುಟ್ಟ ಕಾರ್ಯಗಳಿಗಾಗಿ ಬೆಂಗಳೂರಿನ ವಿಧಾನಸೌಧದ ಕಂಬ ಸುತ್ತುತ್ತಿದ್ದರು, ಅವರಿಗೆ ತತ್‌ಕ್ಷಣ ಹತ್ತಿರದಲ್ಲಿ ಆಡಳಿತಾತ್ಮಕ ವ್ಯವಸ್ಥೆ ಇದೆ. ಅದು ಒಂದು ಶಾಲೆ ಇರಬಹುದು, ರಸ್ತೆ ಇರಬಹುದು, ಆಸ್ಪತ್ರೆ ಇರಬಹುದು, ಹೀಗೆ

ಸ್ಥಳೀಯವಾದಂಥ ಸಮಸ್ಯೆಗಳ ಪರಿಹಾರಕ್ಕೆ ನಾನು ಡಿಟೇಲ್ಸ್‌ಗೆ ಹೋಗುವುದಿಲ್ಲ. ಎರಡನೆಯದು ಅತಿ ಮುಖ್ಯವಾದುದೆಂದರೆ, ಅಕೌಂಟಬಿಲಿಟಿ. ನಾವು ಏಳು ಪಂಚವಾರ್ಷಿಕ ಯೋಜನೆಗಳನ್ನು ನಾವು ಮುಗಿಸಿದ್ದೇವೆ ಆದರೆ ಅವುಗಳಲ್ಲಿ ಯಾವ್ಯಾವ ಖಾತೆಗಳಿಗೆ ಯಾವ್ಯಾವ ಲೆಕ್ಕಕ್ಕೆ ಯಾವ್ಯಾವ ರಾಜ್ಯಗಳಿಗೆ ಬಂದ ಹಣದಲ್ಲಿ ಗ್ರಾಮೀಣ ಪ್ರದೇಶಕ್ಕೆ ಎಷ್ಟು ಮತ್ತು ಯಾವ ಯಾವ ಭಾಗಗಳಿಗೆ ಖರ್ಚಾಯಿತೆಂಬ ಬಗ್ಗೆ ಯಾವುದೂ ಲೆಕ್ಕ ಇರಲಿಲ್ಲ. ಇವತ್ತು ಆ ಲೆಕ್ಕ ಸಿಗುತ್ತದೆ. ಈ ಲೆಕ್ಕ ಸಿಕ್ಕಿದ್ದರಿಂದಲೇ ಬಹಳ ಜನ ಆಳುವವರಿಗೆ ತೊಂದರೆ ಬಂದಿರುವುದು. ಅಲ್ಲಿ ಎಲ್ಲ ಬಹಳ ಪ್ರಾಮಾಣಿಕವಾಗಿ ಸತ್ಯಹರಿಶ್ಚಂದ್ರರೇ ಇದ್ದಾರೆ, ಆಡಳಿತ ಚೆನ್ನಾಗಿ ನಡೆಸಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಲೆಕ್ಕ ಕೇಳತಕ್ಕಂಥ ವ್ಯವಸ್ಥೆ ಇದೆ. ಸ್ವಾತಂತ್ರ್ಯ ಬಂದು ಸುಮಾರು 40 ವರ್ಷಗಳಾದ ಮೇಲೆ ಮತ್ತು 7 ಪಂಚವಾರ್ಷಿಕ ಯೋಜನೆ ಮುಗಿದರೂ ಲೆಕ್ಕ ಕೇಳತಕ್ಕ ವ್ಯವಸ್ಥೆ ಇರಲಿಲ್ಲ. ಇವತ್ತು ಬಹಳ ಜನ ಹೇಳಬಹುದು, ಮಂಡಳದಲ್ಲಿ ದೋಷವಿದೆ, ಜಿಲ್ಲಾ ಪರಿಷತ್ತಿನಲ್ಲಿ ದೋಷವಿದೆ, 100 ರೂಪಾಯಿಯಲ್ಲಿ ಕೇವಲ 25 ಖರ್ಚಾಗುತ್ತದೆ ಇಲ್ಲವೇ 50 ಖರ್ಚಾಗುತ್ತದೆ ಎಂದು. ಆದರೆ ಬಹಳ ಪ್ರಾಮುಖ್ಯವಾಗಿ ಯಾವ ಬಾಬಿಗೆ ಎಷ್ಟು ದುಡ್ಡು ಹೋಗುತ್ತದೆಂದು ಯಾರಿಗೂ ಲೆಕ್ಕ ಕೊಡುತ್ತಿರಲಿಲ್ಲ, ಆ ಲೆಕ್ಕವನ್ನು ಇವತ್ತು ಕೇಳತಕ್ಕ ವ್ಯವಸ್ಥೆ ಇದೆ.

ಶ್ರೀ ಆರ್. ಎನ್. ನಾಯಕ್ : ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಹಣ ಕೊಡುವುದಿಲ್ಲವೆಂದು ಹೇಳಿ ಅಮೆಂಡ್‌ಮೆಂಟ್ ಏನಾದರೂ ತಂದಿದ್ದಾರಾ? ಇದನ್ನು ತಾವು ನೋಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ರೀತಿ ಮಾತನಾಡುತ್ತಿದ್ದಾರೆ. ಅದಕ್ಕೆ

ಶ್ರೀ ಆರ್.ಎನ್. ನಾಯಕ್ : ನಾನು ಸರಿಯಾಗಿ ಮಾತನಾಡುವುದನ್ನು ಕಲಿತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮಾತನಾಡುವುದನ್ನು ಕಲಿತಿದ್ದೀರಿ, ಆದರೆ ಅಧ್ಯಕ್ಷರು ಒಬ್ಬರು ಇದ್ದಾರೆ, ಅವರಿಗೆ ಗೌರವ ಕೊಟ್ಟು ಮಾತನಾಡಬೇಕು ಎಂದು ತಾವು ಕಲಿತಿಲ್ಲ.

ಶ್ರೀ ಆರ್.ಎನ್. ನಾಯಕ್ : ನಾನು ನಿಮ್ಮಿಂದ ಕಲಿಯಬೇಕಾದ್ದು ಬಹಳ ಇದೆ. ನಾನು ಕಲಿಯುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕಲಿಕೆಗಾಗಿ ಹೇಳುತ್ತಿಲ್ಲ, ನಾನು ಗೌರವದಿಂದ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಅವರು ಈಲ್ಡ್ ಆಗಿದ್ದರೆ ನೀವು ಹೇಳಬಹುದಾಗಿತ್ತು. ಆದರೆ ಅವರು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ಈ ಶಾಸನಕ್ಕೆ ತಿದ್ದುಪಡಿ ತರುವುದಕ್ಕೆ ಮುಂಚೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳ ಅಭಿಪ್ರಾಯ ಕೇಳಬೇಕಾಗಿತ್ತು ಎಂದು ಹೇಳಿದಾಗ ನಾನು ಕೇಳಿದ್ದೇನೆಂದು ಸರಳವಾಗಿ ಹೇಳಿದರು. ಆದರೆ ಅವರು ಏನು ಹೇಳಿದಡೂ ಅಂತ ಹೇಳಲಿಲ್ಲ. ಇವರು ಕೇಳಿದ್ದು ಉಂಟು, ಆದರೆ ಹೇಳಿದ್ದು ಏನು? ಎಲ್ಲಾ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು ಬೆಂಗಳೂರಿನಲ್ಲಿ ಸಭೆ ಸೇರಿ ಒಂದು ಠರಾವನ್ನು ಮಂಡನೆ ಮಾಡಿ ಪಾಸ್ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈ ತಿಂಗಳು 17ನೇ ತಾರೀಖು ನಮ್ಮ ಮನೆಗೆ ಅವರು ಬಂದರು. ಅವರನ್ನು ನಾನು ಭೇಟಿ ಮಾಡಿದ್ದೇನೆ. ಕೂಲಂಕುಷವಾಗಿ ಅವರ ಹತ್ತಿರ ನಾನು ಚರ್ಚೆ ಮಾಡಿದ್ದೇನೆ. ಶ್ರೀಮಾನ್ ನಾರಾಯಣ ಸ್ವಾಮಿಯವರು ಅವರ ಮುಖಂಡರಾಗಿ ಬಂದಿದ್ದರು. ಅವರು ಹೇಳತಕ್ಕದ್ದನ್ನೆಲ್ಲ ನಾನು ಕೇಳಿದೆ. ಅವರು ಅಲ್ಲಿ ಸರಬರಾಜು ಕಡಿಮೆಯಾಗಿದೆ, ಮತ್ತೆ ಆಹಾರ ಧಾನ್ಯಗಳ ಸರಬರಾಜು ಕಡಿಮೆಯಾಗಿದೆ ಎಂದು ಹೇಳಿದರು. ಅಲ್ಲಿ ಏನು ಕೆಲಸವಾಗುತ್ತಿದೆಯೋ ಅದನ್ನು ಹೇಳಿದರು. ನೀವು ತಿದ್ದುಪಡಿಯನ್ನು ತರುವುದಕ್ಕೆ ಮುಂಚೆ ನಮಗೆ ಒಂದು ಮಾತನ್ನು ಹೇಳಬೇಕು ಅಂತ ಹೇಳಿದರು. ಆಗ 3 ದಿವಸ ಟೈಂ ಕೊಡುತ್ತೇನೆಂದು ಹೇಳಿದೆ. ಮಾನ್ಯ ದಿ: ನಜೀರ್‌ಸಾಬ್ ಅವರು ಈ ಕಾನೂನಿಗೆ ಏನು ತಿದ್ದುಪಡಿಗಳನ್ನು ತರಬೇಕೆಂದು ಏನು ಇಚ್ಛೆ ಪಟ್ಟಿದ್ದರು, ಅದನ್ನು ಸರ್ಕಾರದಲ್ಲಿ ತಯಾರು ಮಾಡಿ ಇಟ್ಟಿದ್ದಾರೆ, ಅದನ್ನು ಕಾಪಿ ಮಾಡಿ ತಮ್ಮ ಕೈಗೆ ಕೊಡುತ್ತೇನೆ. ಅದರ ಬಗ್ಗೆ ವಿಚಾರ ಮಾಡಿ ನಮಗೆ ಹೇಳಿ, ಆ ತಿದ್ದುಪಡಿಗಳು ಸಮಂಜಸವಾಗಿ ನ್ಯಾಯವಾಗಿದ್ದರೆ ನಾನು ಜಾರಿ ಮಾಡುತ್ತೇನೆಂದು ಹೇಳಿದೆ. ಆದರೆ ಇವತ್ತಿನವರೆಗೂ ಯಾರು ಸಹ ಬಂದಿಲ್ಲ. ನಜೀರ್‌ಸಾಬ್‌ರವರು ಏನು ಈ ತಿದ್ದುಪಡಿಗಳನ್ನು ಮಾಡಬೇಕು ಅಂತ ಇದ್ದರು, ಅದೇ ಮುಕ್ಕಾಲು ಭಾಗ ಇಲ್ಲವೇ ಜಾಸ್ತಿ ಇದರಲ್ಲಿದೆ. ಆದಕ್ಕೆ ಅವರು ಇದುವರೆಗೂ ಬಂದಿಲ್ಲ. ಇದರ ಬಗ್ಗೆ ಮೂರು ಗಂಟೆ ಚರ್ಚೆ ಮಾಡಿದ್ದಾರೆ,

ಚರ್ಚೆ ಮಾಡಿಲ್ಲವೆಂದು ಆಪಾದನೆ ಮಾಡಬೇಡಿ. ಅವರೇನು ನನಗೆ ಹೇಳಿಲ್ಲ. ತಿದ್ದುಪಡಿ ಹೀಗಿರಬೇಕೆಂದು ಅವರೇನು ನನಗೆ ಸಲಹೆಯನ್ನು ಮಾಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಮಾನ್ಯ ಮಂತ್ರಿಗಳು ಹೇಳಿದಹಾಗೆ ಚರ್ಚೆ ಹೇಗೆ ಆಗಿದೆ ಎಂದು ಗೊತ್ತಾಯಿತು. 17ನೇ ತಾರೀಖು ಸಭೆ ಕರೆದು, 20ನೇ ತಾರೀಖು ನಜೀರ್ ಸಾಬ್‌ರವರು ಕೊಟ್ಟಿದ್ದ ತಿದ್ದುಪಡಿಯನ್ನು ಕೊಟ್ಟಿದ್ದೇವೆ. ಇವತ್ತಿನವರೆಗೂ ಅದಕ್ಕೆ ಉತ್ತರ ಬಂದಿಲ್ಲವೆಂದು ಹೇಳಿದರು. ಇಂದು ತಾರೀಖು ಎಷ್ಟು? ಒಂದು ವಾರದಲ್ಲಿ ಇಂತಹ ಮಹತ್ವದ ತಿದ್ದುಪಡಿಯ ಬಗ್ಗೆ ಅವರ ಅಭಿಪ್ರಾಯ ಬರಬೇಕಾಗಿತ್ತು ಎಂದು ಏನು ಮಂತ್ರಿಗಳು ಬಯಸುತ್ತಾರೆ, ಅದು ಕಟ್ಟು ಹಾಕುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮೂರು ಗಂಟೆ ಕೊಡಬೇಕಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅದರ ಬಗ್ಗೆ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಚರ್ಚೆ ಅನ್ನುವುದಕ್ಕೆ ಅರ್ಥದ ವ್ಯಾಪ್ತಿಯು ಬೇರೆ. ನಿಮ್ಮ ದೃಷ್ಟಿಯಲ್ಲಿ ಚರ್ಚೆಗೆ 3 ವರ್ಷ ಬೇಕೋ 30 ವರ್ಷ ಬೇಕೋ ಎಂದು ಮುಂದೆ ಗೊತ್ತಾಗುತ್ತದೆ. ಆದರೆ ಇಂತಹ ಒಂದು ಶಾಸನಕ್ಕೆ ತಿದ್ದುಪಡಿಯನ್ನು ತರತಕ್ಕ ಕಾಲದಲ್ಲಿ ಮುಖ್ಯವಾದಂತಹ ಪ್ರಶ್ನೆ ಏನೆಂದರೆ ಶಾಸನಗಳು, ಶಾಸಕರಿಗಾಗಿ ಬದಲಾವಣೆಯೂ ಇಲ್ಲ ರಾಜ್ಯದ ಜನತೆಗಾಗಿಯೋ? ಇದು ಮುಖ್ಯವಾದಂತಹ ಪ್ರಶ್ನೆಯಾಗಿದೆ. ಆದ್ದರಿಂದ ಈ ಶಾಸನ ಸಭೆಯಲ್ಲಿ ಶಾಸನ ಸಭಾ ಸದಸ್ಯರಿಗೆ ಇದರ ಅವಶ್ಯಕತೆಯಿದೆಯೆಂದು ಕಂಡರೆ ಸಂಖ್ಯೆಯನ್ನು ಅತಿ ಮಾಡಿಕೊಳ್ಳಬಹುದು. ಇವತ್ತು ಸಂಖ್ಯೆಗಳ ಏರುಪೇರು ಏನಿದೆ ನಮ್ಮ ದೇಶದಲ್ಲಿ ಅದನ್ನು ನಾವು ನೋಡುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ನಾಲ್ಕು ವರ್ಷದ ಹಿಂದೆ ಇದನ್ನು ಬಹಳವಾಗಿ ಒಂದೂವರೆ ವರ್ಷ ಚರ್ಚೆ ಮಾಡಿ, ಎಲ್ಲಾ ಪಾರ್ಟಿಯವರೂ ಸೇರಿ ಈ ಆಕ್ಟನ್ನು ಜಾರಿಗೆ ತಂದರು. ಮಾನ್ಯ ಚಂದ್ರೇಗೌಡರು ಇದನ್ನು ಶಾಸಕರ ಹಿತದೃಷ್ಟಿಯಿಂದ ತಂದಿದ್ದಾರೋ, ಜನತೆಯ ಹಿತದೃಷ್ಟಿಯಿಂದ ತಂದಿದ್ದಾರೋ ಎನ್ನುವ ಪ್ರಶ್ನೆಯನ್ನು ಕೂಡ ಕೇಳುತ್ತಿದ್ದಾರೆ. ಇದು ನಾಲ್ಕು ವರ್ಷ ಜಾರಿಯಲ್ಲಿತ್ತು. ಇಂಥ ಮಹತ್ವವಾದ ಆಕ್ಟನ್ನು ಜಾರಿಗೊಳಿಸಿದ ಮೇಲೆ, ಮೂರು ವರ್ಷ ಅಧಿಕಾರದಲ್ಲಿದ್ದ ಮೇಲೆ ಜನಗಳ ಮುಂದೆ ಹೋದರು. ಇದು ಸುಮಾರು 80–85 ಪರ್ಸೆಂಟ್ ಜನಸಂಖ್ಯೆಗೆ ಅನ್ವಯಿಸುವಂಥ ಇಂತಹ ಕ್ರಾಂತಿಕಾರಕವಾದ ಆಕ್ಟ್ ಅನ್ನು ಅವರ ಪ್ರಕಾರ. ಜಾರಿಗೆ ತಂದ ಮೇಲೆ, ಇದರ ಪ್ರತಿಫಲ ಅವರಿಗೆ ಏನು ದೊರೆಯಿತು? ಜನ ಮೆಚ್ಚಿಕೊಂಡಿದ್ದರೆ, ಬಹುಶಃ ಅವರು ಅಧಿಕಾರದಲ್ಲಿರುತ್ತಿದ್ದರು. ಈಗ 139 ಜನ ಇದ್ದವರು 24 ಜನರಾಗಿ ಇಲ್ಲಿ ಕುಳಿತಿದ್ದಾರೆ. ಇದರ ಅರ್ಥ ಏನು? ಆಗ ಅವರಿಗೆ ಬೇಕಾಗಿತ್ತು; ಅದನ್ನು ತಂದರು. ಆದರೆ ಜನ ಅದನ್ನು ಇಷ್ಟ ಪಡಲಿಲ್ಲ, ತಿರಸ್ಕರಿಸಿದರು, ಆದ್ದರಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ : ನಿಮಗೆ ಒಂದು ಪರ್ಸೆಂಟ್ ಓಟೂ ಸಿಗಲಿಲ್ಲ. ನಮ್ಮ ಓಟು ಡಿವೈಡ್ ಆಯಿತು, ಅಷ್ಟೇ.

ಶ್ರೀ ಕೆ.ಹೆಚ್. ಹನುಮೇಗೌಡ : ಈಗ ನಾವು ಅಧಿಕಾರಕ್ಕೆ ಬಂದಿದ್ದೇವೆ. ಜನಗಳು ನಮಗೆ ಆದೇಶ ಕೊಟ್ಟಿದ್ದಾರೆ. ಜನಗಳ ಹಿತವೇನು ಎಂಬುದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಕೆ..ಹೆಚ್. ಹನುಮೇಗೌಡ : ನಮ್ಮ ಪಾರ್ಟಿಗೋಸ್ಕರ, ನಮ್ಮ ದೇಶಕ್ಕೋಸ್ಕರ, ಗ್ರಾಮಾಂತರ ಪ್ರದೇಶದ ಜನರಿಗೋಸ್ಕರ ಯಾವುದು ಒಳ್ಳೆಯದೆಂದು ಕಾಣುತ್ತಿದೆಯೋ, ಇದನ್ನು ನಮ್ಮ ಮೂರು ವರ್ಷದ ಅನುಭವದ ಮೇಲೆ ನಾವು ತರುತ್ತಿದ್ದೇವೆ. ಏಕೆ ತರಕೂಡದು? ಆಗ ನೀವು ನಮ್ಮನ್ನು ಕೇಳಿದ್ದಿರಾ? ಬುಲ್‌ಡೋಜರ್ ತರಹ ಮಾಡಬಾರದ್ದನ್ನು ಮಾಡಿ, ಕೋಟ್ಯಾಂತರ ರೂಪಾಯಿಗಳ ವಂಚನೆ ಮಾಡಿ ಹಣವನ್ನು ಕೊಳ್ಳೆಹೊಡೆದಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಈ ರೀತಿಯ ಭಾಷಣವನ್ನು ಎಲ್ಲರೂ ಮಾಡುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ಇರುವಂಥ ವಿಚಾರವನ್ನು ಹೇಳುತ್ತಿದ್ದೇನೆ, ಅಷ್ಟೇ.

(ಹತ್ತಾರು ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡಿದರು)

ಅಧ್ಯಕ್ಷರು : ಶ್ರೀ ಹನುಮೇಗೌಡರೇ ನೀವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಹನುಮೇಗೌಡರೇ, ನೀವು ಹೇಳಿದ್ದು ಆಯಿತಲ್ಲ, ದಯವಿಟ್ಟು ಕುಳಿತುಕೊಳ್ಳಿ. ಸೌಜನ್ಯದಿಂದ ಅವರು ನಿಮಗೆ ಇಂಟರ್‌ವಿನ್ ಮಾಡುವುದಕ್ಕೆ ಅವಕಾಶ ಕೊಟ್ಟರು. ಅವರು ಮಾಡಿದ ತಪ್ಪು ಅದೇ. ನಾವು ಶಾಸನ ಸಭೆಯನ್ನು ಒಂದು ಶಿಸ್ತಿನ ಚೌಕಟ್ಟಿನಲ್ಲಿ ನಡೆಸುವುದನ್ನು ಮರೆತುಬಿಡಬಾರದು. ನೀವು ಒಂದು ವಾದವನ್ನು ಇಟ್ಟಿದ್ದೀರಿ. ಅದನ್ನು ಅವರು ವಿರೋಧಿಸುತ್ತಿದ್ದಾರೆ. ವಿರೋಧ ಮಾಡುವುದಕ್ಕೇ ಅವರು ಇರತಕ್ಕಂಥಾದ್ದು. ಅವರ ಅಭಿಪ್ರಾಯಗಳನ್ನು ತೀಕ್ಷ್ಣವಾಗಿ ಅವರು ಹೇಳುತ್ತಿದ್ದಾರೆ. ಚರ್ಚೆ ಮಾಡುವಂಥ ಕಾಲದಲ್ಲಿ ನಿಮ್ಮ ಅಭಿಪ್ರಾಯಗಳನ್ನು ತೀಕ್ಷ್ಣವಾಗಿ ನೀವೂ ಸಹ ಹೇಳಬಹುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಅನೇಕ ಮಾನ್ಯ ಮಂತ್ರಿಗಳು ಮತ್ತು ಹಿರಿಯ ಸದಸ್ಯರ ಹಾಗೂ ಎಲ್ಲ ಸದಸ್ಯರ ಅಭಿಪ್ರಾಯವನ್ನು ನೀವು ಸಂಗ್ರಹಣೆ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ಚಂದ್ರೇಗೌಡರು ಮಾತನಾಡುತ್ತಿದ್ದಾಗ ಅವರು ಯೀಲ್ಡ್ ಆದರೂ ಎಂದು ಹೇಳಿ ಮಾನ್ಯ ಸದಸ್ಯರಾದ ಹನುಮೇಗೌಡರು ಎದ್ದು ನಿಂತು ಜಿಲ್ಲಾ ಪರಿಷತ್ ಬಗ್ಗೆ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಸಂತೋಷ ಅವರು ಹೇಳಲಿ. ಆದರೆ ಈ ಸಂದರ್ಭದಲ್ಲಿ ಅವರು ಸ್ಪೆಸಿಫಿಕ್ ಅಲಿಗೇಷನ್ ಮಾಡಿದ್ದಾರೆ, ಕೋಟ್ಯಾಂತರ ರೂಪಾಯಿ ಹಣವನ್ನು ಚಂದ್ರೇಗೌಡರು ಲೂಟಿ ಮಾಡಿದ್ದಾರೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು. ಅವರು ಹೇಳಿಲ್ಲ ಹಾಗೆ ಅಂತ ಹೇಳುತ್ತಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ಅವರು ಹೇಳಿದ್ದಾರೆ, ದಯವಿಟ್ಟು ರೆಕಾರ್ಡ್ಸ್ ತೆಗೆದು ನೋಡಬೇಕು.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಚಂದ್ರೇಗೌಡರು ಆಗ ಇರಲಿಲ್ಲ. ಅವರು ಭಾಗಿ ಸಹ ಅಲ್ಲ. ನಾನು ಹೇಳಿದ್ದು ಆಗ ಅಧಿಕಾರ ಮಾಡಿ ಈ ಆ್ಯಕ್ಟ್‌ನ ಮುಖಾಂತರ ಜನರಿಗೆ ಕೋಟ್ಯಾಂತರ ರೂಪಾಯಿಗಳ ತೊಂದರೆ ಆಯಿತು ಎಂದು ಹೇಳಿದನೇ ಹೊರತು ಚಂದ್ರೇಗೌಡರು ಮಾಡಿದರು ಎಂದು ನಾನು ಹೇಳಲಿಲ್ಲ..

ಶ್ರೀ ಪಿ.ಜಿ.ಆರ್: ಮಾನ್ಯ ಅಧ್ಯಕ್ಷರೆ, ನಾನು ಸ್ಪೆಸಿಫಿಕ್ ಆಗಿ ಅದನ್ನೇ ಕೇಳುತ್ತಿದ್ದೇನೆ. ಈಗ ಹನುಮೇಗೌಡರು ಎರಡು ನಿಮಿಷದಲ್ಲಿ ಏನು ಅಭಿಪ್ರಾಯ ಹೊಂದಿದ್ದರು ಅದನ್ನೇ ಬದಲಾವಣೆ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ: ಅಧ್ಯಕ್ಷರೆ, ನಾನು ಏನು ಹೇಳಿದ್ದೇನೆಂದು ರೆಕಾರ್ಡ್ಸ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ತಾವು ನಿಯಮಗಳ ಪ್ರಕಾರ ಚರ್ಚೆ ಮಾಡಿಸಲಿಕ್ಕೆ ಇಲ್ಲಿ ಇದ್ದೀರಿ. ಹನುಮೇಗೌಡರು ಹಾಗೆ ಹೇಳಲಿಲ್ಲ, ಚಂದ್ರೇಗೌಡರು ಕೊಳ್ಳೇ ಹೊಡೆದಿಲ್ಲ ಎಂದು ಕ್ಲಾರಿಫಿಕೇಷನ್ ಕೊಟ್ಟದ್ದಾರೆ. ಈಗ ನಾನು ಹೇಳುತ್ತಿದ್ದಾರೆಂದರೆ ಇವರು ಏನು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾನೂನುಗಳನ್ನು ಮಾಡಿ ದೇಶದ ಕೋಟ್ಯಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದರು ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಯಾರು ಕೊಳ್ಳೆ ಹೊಡೆದಿದ್ದಾರೆ. ಇವರ ಹತ್ತಿರ ಸಾಕ್ಷಿ, ಪುರಾವೆ ಇದ್ದರೆ ಕೊಡಬೇಕಾಗುತ್ತದೆ. ಆಗ ಮಾನ್ಯ ಮುಖ್ಯಮಂತ್ರಿಗಳಾಗಿದ್ದವರು ಇದ್ದಾರೆ, ಮಂತ್ರಿಗಳಾಗಿದ್ದವರು ಇದ್ದೇವೆ, ನಾವೆಲ್ಲಾ ಇದ್ದೇವೆ. ನಾವೆಲ್ಲಾ ಈ ಸದನದ ಸದಸ್ಯರಾಗಿದ್ದೇವೆ. ಹನುಮೇಗೌಡರ ಕೈಯಲ್ಲಿ ಹೇಳಿಸಿಕೊಂಡು ನಾನು ಇಲ್ಲಿ ಮಾತನಾಡಲಿಕ್ಕೆ ಅಥವಾ ಪತ್ರಿಕೆಗಳಲ್ಲಿ ಇವರೆಲ್ಲಾ ಕೊಳ್ಳೆ ಹೊಡೆದುಬಿಟ್ಟರಂತೆ ಅಂತ ಹೇಳಿ ಸರ್ಟಿಫಿಕೇಟ್ ತೆಗೆದುಕೊಳ್ಳತಕ್ಕ ಅಗತ್ಯ ಇಲ್ಲ. ನಾವು ಕೊಳ್ಳೆ ಹೊಡೆದಿದ್ದೇವೆ ಎನ್ನುವುದಾದರೆ ಅವರ ಹತ್ತಿರ ಸಾಕ್ಷಿ ಆಧಾರ, ಪುರಾವೆ ಇದ್ದರೆ ಅವರು ಈ ಮೂಲಕ ಈ ಸದನಕ್ಕೆ ತಿಳಿಸಿದರೆ ನಾವು ಸಹಿತ ಅದಕ್ಕೆ ಏನು ಪ್ರೊಟೆಕ್ಷನ್ ಮಾಡಬೇಕು, ಏನು ಮಾತನಾಡಬೇಕೆಂದು ಗೊತ್ತಾಗುತ್ತದೆ. ಅದರ ಬದಲಾಗಿ ಇಲ್ಲಿ ಮಾತನಾಡಲಿಕ್ಕೆ ಮೆಜಾರಿಟಿ ಜನರು ಟೇಬಲ್ ಕುಟ್ಟುತ್ತಾರೆಂದು ಇವರು ಕೆರುಚಾಡುತ್ತಾರೆ, ಅರುಚಾಡುತ್ತಾರೆ, ಎಂದು ಹೇಳಿ ಬಾಯಿಗೆ ಬಂದ ಹಾಗೆ ಇವರು ಮಾತನಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಬಾಯಿಗೆ ಬಂದಹಾಗೆ ಮಾತನಾಡುವುದಕ್ಕೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ತಾವು ಒಂದು ಕೆಲಸಮಾಡಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಹನುಮೇಗೌಡರು ಎರಡು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ತಾವು ಏತಕ್ಕೆ ತಾಳ್ಮೆ ಕಳೆದುಕೊಳ್ಳುತ್ತಿದ್ದೀರಿ. ತಾವು ಶಾಂತರೀತಿಯಿಂದ ಕೇಳಬೇಕು. ಅನಂತರ ನಿಮ್ಮ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳುತ್ತೇವೆ. ನೀವು ಮಾತನಾಡಬೇಡಿ ಹೊರತುಕೊಳ್ಳಿ ಅಂದರೆ ಹೊರತುಕೊಳ್ಳುತ್ತೇವೆ. ನಾನು ಹನುಮೇಗೌಡರ ಮೇಲೆ ಅಥವಾ ಬೇರೆ ಯಾವ ಸದಸ್ಯರ ಮೇಲೆ ಯಾವುದೇ ತರಹ ಚೇಷ್ಟೆಗಳನ್ನು ಮಾಡಲಿಕ್ಕೆ ನಾನು ಇಲ್ಲಿಗೆ ಬಂದಿಲ್ಲ. ತಾವು ಒಂದು ಕೆಲಸ ಮಾಡಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಹನುಮೇಗೌಡರು ಏನು ಅಲೆಗೇಷನ್ ಮಾಡಿದ್ದಾರೆ ಅದು ರೆಕಾರ್ಡ್ಸ್‌ನಲ್ಲಿದೆ, ಅದನ್ನು ನೋಡಿ ತಾವು ರೂಲಿಂಗ್ ಕೊಡಿ.

ಅಧ್ಯಕ್ಷರು : ಅದನ್ನು ನೋಡಿ ನಾನು ರೂಲಿಂಗ್ಸ್ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇದುವರೆಗೂ ಈ ಸದನದಲ್ಲಿ ವಿಧೇಯಕವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಒಂದು ಪ್ರಸ್ತಾವನ್ನು ಇಟ್ಟಂಥ ಸಂದರ್ಭದಲ್ಲಿ ಇದುವರೆಗೂ ಯಾರೂ ಅದನ್ನು ವಿರೋಧ ಮಾಡುವಂಥ ಪದ್ಧತಿ ಇಲ್ಲಿ ನಡೆದಿಲ್ಲ. ಇದು ಒಂದು ವಿಶೇಷವಾದಂಥ ಸಂದರ್ಭವಾದ್ದರಿಂದ ಅಧಿಕಾರ ವಿಕೇಂದ್ರೀಕರಣದ, ಶಾಸನದ ಮೂಲ ಸ್ವರೂಪವನ್ನೇ ವಿಕೃತಗೊಳಿಸುವಂಥ ಪ್ರಯತ್ನ ಬಸವಲಿಂಗಪ್ಪನವರು ಮಾಡುತ್ತಿರುವಂಥ ಈ ಸಂದರ್ಭದಲ್ಲಿ ಈ ಪ್ರಸ್ತಾವನೆ ಸಂದರ್ಭದಲ್ಲಿ ಇದರ ಬಗ್ಗೆ ಒಂದು ವ್ಯಾಪಕ ಚರ್ಚೆಯಾಗಿ ಅದನ್ನು ವಾಪಸ್ಸು ತೆಗೆದುಕೊಂಡು ಎಲ್ಲರ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು ಎನ್ನುವ ಹಿನ್ನೆಲೆಯಲ್ಲಿ ನಾವು ಮಾತನಾಡುತ್ತಿದ್ದೇವೆ. ಇದು ಚರ್ಚೆಯಾಗುವಂಥ ಅಗತ್ಯ ಇಲ್ಲ. ಬಹುಮತ ಇದೆ, ಮನಸ್ಸಿಗೆ ಬಂದಹಾಗೆ ಮಾಡುತ್ತೇವೆ ಅಂದರೆ, ನೀವು ಈಗಲೇ ವಾಕ್‌ಔಟ್ ಮಾಡಿ ಹೊರಟುಹೋಗಿ ಅಂದರೆ ಹೋಗಲು ನಾವು ಸಿದ್ಧರಿದ್ದೇವೆ. ಆದರೆ ಇಲ್ಲಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಈ ರೀತಿ ಬಹುಮತ ಇದೆಯೆಂದು ಚರ್ಚೆಗೆ ಅವಕಾಶವನ್ನೇ ಕೊಡದೆ ಪ್ರತಿಯೊಂದು ಹಂತದಲ್ಲೂ ಅಡ್ಡಿಯನ್ನು ಮಾಡುವುದು ಸರಿಯಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ ಅನೇಕ ವರ್ಷಗಳಿಂದ ಈ ಕನಸು ಇತ್ತು. ಈಗ ಇದನ್ನು ಪಾಸ್ ಮಾಡಿಸಿಕೊಂಡು ಅವರು ನಿರಾಳವಾಗಿ ನಿದ್ದೆ ಮಾಡಬಹುದು. ಇದನ್ನು ವಿಕೃತಗೊಳಿಸಬೇಕೆಂಬ ಅವರ ಬಹುದಿನಗಳ ಆಸೆ ಏನಿತ್ತು ಅದನ್ನು ಈಗ ಪೂರೈಸಿಕೊಳ್ಳುವುದಕ್ಕೆ ಹೊರಟಿದ್ದಾರೆ. ಆದರೆ ಆ ಕಡೆ ಕೂತಿರತಕ್ಕ ನಮ್ಮ ಮಾನ್ಯ ಶಾಸಕರು ಮೈಮರೆತು ಈ ತಿದ್ದುಪಡಿಗೆ ಒಪ್ಪಿಕೊಂಡರೆ ನಾಳೆ ಮತ್ತೆ ನೀವು ಜನತೆಯ ಮುಂದೆ ಹೋಗುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೆ ನೀವು ಅವಕಾಶ ಕೊಡಬೇಡಿ ಎಂದು ನನ್ನ ವಿನಂತಿ.

(ಗೊಂದಲ)

ಶ್ರೀ ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಜೆ.ಪಿ. ಮುಖಂಡರು ನನ್ನ ಮೇಲೆ ವೈಯುಕ್ತಿಕ ಆಪಾದನೆ ಮಾಡುತ್ತಿದ್ದಾರೆ;

ಶ್ರೀ ವಾಟಾಳ್ ನಾಗರಾಜ್ : ನಿಮಗಿರತಕ್ಕ ತಿಳುವಳಿಕೆಯ ಬಗ್ಗೆ ಹೇಳುತ್ತಿದ್ದಾರೆ. ನೀವು ಪ್ರತಿನಿತ್ಯ ಏನು ಮಾಡುತ್ತಿದ್ದೀರಿ ಅದನ್ನು ಅವರು ಹೇಳುತ್ತಿದ್ದಾರೆ. ಇದರಲ್ಲಿ ವೈಯುಕ್ತಿಕ ಏನೂ ಇಲ್ಲ. ಈ ಹಿಂದಿನ ಸರ್ಕಾರ ಇದನ್ನು ಮಾಡುತ್ತೇವೆಂದು ಹೇಳಿ ಜಾರಿಗೆ ತಂದರು. ಈಗ ನಿಮ್ಮ ಸರ್ಕಾರ ಬಂದಮೇಲೆ...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ: ನಾನು ನನ್ನ ಪಕ್ಷದ ಪ್ರತಿನಿಧಿಯಾಗಿ ನಿಂತುಕೊಂಡು ಈ ವಿಧೇಯಕ ಮಂಡಿಸಿದ್ದೇನೆ. ಇದರಿಂದ ನನಗೆ ಶಾಂತಿಯಾಗಲಿ, ಸಮಾಧಾನವಾಗಲಿ ಸಿಕ್ಕುತ್ತದೆಂದು ಅಲ್ಲ. ನನ್ನ ಪಾರ್ಟಿಯ ಹಿತವಾಗಬೇಕು, ರಾಜ್ಯದ ಹಿತವಾಗಬೇಕು. ಈ ದೇಶದ ಹಿತ ಆಗಬೇಕು. ಮತ್ತೆ...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ಈ ಸಂಸ್ಥೆಯ ಮುಖಾಂತರ ಬಡವರಿಗೆ ಅನುಕೂಲವಾಗಬೇಕೇ ಹೊರತು

ನಿಮ್ಮನ್ನು ತೃಪ್ತಿಪಡಿಸುವುದಕ್ಕೆ ಅಲ್ಲ. ನಿಮ್ಮನ್ನು ತೃಪ್ತಿಪಡಿಸುವುದರಿಂದ ನನಗೇನು ಲಾಭವಿದೆ? ನೀವು ವಿರೋಧಿಗಳು, ವಿರೋಧ ಮಾಡಿಡುತ್ತೀರಿ. ನಿಮ್ಮ ಕೆಲಸವನ್ನು ನೀವು ಮಾಡಿ, ನಮ್ಮ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನೀವು ಮಾಡುತ್ತಿರುವಂಥ ಜನ ವಿರೋಧಿ ನೀತಿ ಏನಿದೆ, ಅದನ್ನು ಶಾಸನದ ಮುಖಾಂತರ ತಂದು ಅಧಿಕಾರ ವಿಕೇಂದ್ರೀಕರಣಕ್ಕೆ ಧಕ್ಕೆಯನ್ನು ತರುವುದಕ್ಕೆ ಹೊರಟಿದ್ದೀರಿ. ಅದನ್ನು ವಿರೋಧ ಮಾಡುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಅಧಿಕಾರ ವಿಕೇಂದ್ರೀಕರಣಕ್ಕೆ ಧಕ್ಕೆ ತರುವ ಕೆಲಸವನ್ನು ಏನು ಮಾಡುತ್ತಿದ್ದೀರಿ ಅದನ್ನು ನಾವು ಪ್ರಾರಂಭದಲ್ಲೇ ವಿರೋಧ ಮ್ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಸಂಕ್ಷಿಪ್ತ ವಿವರಣೆ ಎಂದು ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿದೆ. ಆದ್ದರಿಂದ ಇದು ಸಂಕ್ಷಿಪ್ತ ವಿವರಣೆ ಆಯಿತೆಂದು ನಾನು ಭಾವಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಕ್ಷಿಪ್ತ ವಿವರಣೆ ಎಂದರೆ ಹನುಮೇಗೌಡರದ್ದೇ ದೊಡ್ಡ ವಿವರಣೆ ಆಯಿತು.

ಶ್ರೀ ಕೆ.ಹೆಚ್ ಹನುಮೇಗೌಡ : ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು : ಅವರು ಈಲ್ಡ್ ಆಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಸಾರಿ ಗೊತ್ತಾದ ಮೇಲೆ ಮತ್ತೆ ನಾನು ತಪ್ಪು ಮಾಡುವುದಿಲ್ಲ. ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದರು, ಅಧಿಕಾರ ಇದ್ದಾಗೆ ತಮಗೆ ಬೇಕುಬೇಕಾದಂಥ ರೀತಿಯಲ್ಲಿ ಶಾಸನಗಳನ್ನು ಮಾಡಿಕೊಂಡರು ಅಂತ ನಾನು ಮಾನ್ಯ ಹನುಮೇಗೌಡರ ಗಮನಕ್ಕೆ ತರುತ್ತೇನೆ ನಿಮಗೆ ವೈಯುಕ್ತಿಕವಾಗಿ ಈ ಶಾಸನವನ್ನು ವಿರೋಧ ಮಾಡಬೇಕಾದ ಕಾರಣ ಇರಬಹುದು; ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ತಾವು ಆಪಾದನೆಯನ್ನು ಮಾಡುವಾಗ ನಾನು ಇರಲಿಲ್ಲ. ನಾನು ಪ್ರಾರಂಭದಲ್ಲೇ ಹೇಳಿದೆ, ಈ ಮಸೂದೆ ಈ ಶಾಸನ ಸಭೆಯಲ್ಲಿ ಮಂಡನೆಯಾದಾಗ ನಾನು ಅಧ್ಯಕ್ಷ ಪೀಠದಲ್ಲಿ ಕೂತಿದ್ದೆ. ಆದ್ದರಿಂದ ಇದರ ಬಗ್ಗೆ ಏನು ನಡೆಯಿತೆಂಬ ಪರಿಪೂರ್ಣ ಮಾಹಿತಿ ನನಗಿದೆ. ನಾನು ಅಧ್ಯಕ್ಷ ಪೀಠದಲ್ಲಿ ಕೂತು ಕೆಲಸ ಮಾಡುವಾಗ ನೀವು ಹೇಳಿದಂಥ ಆಪಾದನೆಗಳಿಂದ ನನ್ನ ಮನಸ್ಸಿಗೆ ಅನೇಕ ಸಂದರ್ಭಗಳಲ್ಲಿ ಪ್ರಚೋದನೆ ಮಾಡಿರತಕ್ಕದ್ದು ಉಂಟು. ಆದರೆ ಇಡೀ ಶಾಸನಸಭೆಗೆ ಅಗೌರವ ತರತಕ್ಕ ಭಾಷೆ ಒಳ್ಳೆಯದಲ್ಲ. ತಮ್ಮ ತಮ್ಮ ಅನಿಸಿಕೆಗಳನ್ನು ಇಲ್ಲಿ ತರತಕ್ಕ ಅಧಿಕಾರ, ಅವಕಾಶ ಎರಡೂ ಕೂಡ ತಮಗಿದೆ. ಆದರೆ ಹಿಂದೆ ಶಾಸನಸಭೆಯಲ್ಲಿ ನಡೆದಂಥ ಒಂದು ವಿಷಯ ಏನೆಂದರೆ, ನಮಗೆ ಬಹುಮತ ಇದೆಯೆಂದು ಈ ಶಾಸನವನ್ನು ಪಾಸ್ ಮಾಡುವುದಕ್ಕೆ ಹೋಗಲಿಲ್ಲ. ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕೆಂಬ ಅಭಿಪ್ರಾಯವನ್ನು ಕಾಂಗ್ರೆಸ್ ಪಕ್ಷದವರು ವ್ಯಕ್ತ ಮಾಡಿದರು. ಆಗ ನಾನು ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳನ್ನು, ಮಂತ್ರಿಮಂಡಲದ ಸದಸ್ಯರನ್ನು ಪ್ರಾರ್ಥಿಸಿದೆ. ಈ ವಿಧೇಯಕ ಬಹಳ ಮಹತ್ವದ್ದಿದೆ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸೋಣ ಎಂದು ಹೇಳಿದೆ. ಆದಕ್ಕೆ ಅವರು ಒಪ್ಪಿಕೊಂಡರು. ನಾನು ಒಬ್ಬ ಅಧ್ಯಕ್ಷನಾಗಿ ಮಾಡಿದ ಕೆಲಸವನ್ನು ನಾನು ಹೇಳುತ್ತಿದ್ದೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿ 29 ಸಾರಿ ಸಭೆ ಸೇರಿತ್ತು. ಪರಿಪೂರ್ಣವಾಗಿ ಇದನ್ನು ವಿಮರ್ಶೆ ಮಾಡುವುದಕ್ಕೆ ಮುಂಚಿತವಾಗಿ ನಾವು 4–5 ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಅಭಿಪ್ರಾಯಗಳನ್ನು ಸಂಗ್ರಹ ಮಾಡಿಕೊಂಡು ಬಂದಿದ್ದರು. ಆದ್ದರಿಂದ ನಾನು ಹೇಳುತ್ತಿದ್ದೇನೆ, ತಾವು ಹಿರಿಯ ಸದಸ್ಯರಿದ್ದೀರಿ, ಅನುಭವ ಇರತಕ್ಕ ಸದಸ್ಯರಿದ್ದೀರಿ, ಈ ರೀತಿ ಆಪಾದನೆಯನ್ನು ದಯವಿಟ್ಟು ಮಾಡಬೇಡಿ. ಇದು ನಿಮಗೆ, ನಿಮ್ಮ ಎತ್ತರಕ್ಕೆ ಸರಿಯಲ್ಲವೆಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಎಂ. ರಾಮಪ್ಪ : ಮಾನ್ಯ ಅಧ್ಯಕ್ಷರೇ, ಅವರು ಈ ವಿಚಾರವನ್ನು ಹೇಳಿದ್ದರಿಂದ ನಾನೂ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಬಿಲ್ ಬಂದಾಗ ...

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಸರದಿ ಬಂದಾಗ ನೀವೂ ಹೇಳಿ.

ಶ್ರೀ ಎಂ. ರಾಮಪ್ಪ : ಮಾನ್ಯ ಪ್ರಕಾಶ್‌ರವರೇ ಇದನ್ನು ಮೊದಲು ಪ್ರಾರಂಭ ಮಾಡಿದ್ದು. ಇದರಲ್ಲಿ

ಬಹಳ ಲೋಪದೋಷಗಳಿದೆ ಎಂದು ಅದನ್ನು ನೋಡುತ್ತಾ ನೋಡುತ್ತಾ ಸರಿ ಮಾಡಬೇಕೆಂದು ಮಾನ್ಯ ಪ್ರಕಾಶ್‌ರವರೂ ಹೇಳಿದ್ದು ರೆಕಾರ್ಡ್‌ನಲ್ಲಿದೆ. ಸದ್ಯಕ್ಕೆ ಈಗ ಮಾಡಿರುವುದು ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ನೆಗಡಿ ಬಂದ ತಕ್ಷಣ ಮೂಗನ್ನು ಕೊಯ್ದುಕೊಳ್ಳಲಾಗುವುದಿಲ್ಲ. ಅದಕ್ಕೆ ಮೆಡಿಸನ್ ಇದೆ. We can give medicine.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ತಿದ್ದುಪಡಿಯ ಬಗ್ಗೆ ಮತ್ತು ಇದರಲ್ಲಿ ಆಗಿರತಕ್ಕಂಥದ್ದಕ್ಕೆ ನಾನು ಕೂಡ ಅಭಿಪ್ರಾಯವನ್ನು ಸಂಗ್ರಹಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನನ್ನ ಅಭಿಪ್ರಾಯ ಸಂಗ್ರಹಣೆ ನಿಮ್ಮ ರೀತಿಯಲ್ಲ. ನಾನು ಅಭಿಪ್ರಾಯ ಸಂಗ್ರಹಣೆ ಮಾಡಿದ್ದು, ತಾಲ್ಲೂಕ್ ಸಮಿತಿಯ ಅಧ್ಯಕ್ಷನಾಗಿ, ನಮ್ಮ ಕ್ಷೇತ್ರದ ತೀರ್ಥಹಳ್ಳಿ ತಾಲ್ಲೂಕ್ ಸಮಿತಿಯ ಅಧ್ಯಕ್ಷನಾಗಿ, ಅಲ್ಲಿ ಬಿಜೆ.ಪಿ. ಸದಸ್ಯರು ಇದ್ದಾರೆ, ಕಾಂಗ್ರೆಸ್ ಪಕ್ಷದ ಸದಸ್ಯರು ಇದ್ದಾರೆ ಮತ್ತು ಯಾವುದೇ ಪಕ್ಷಕ್ಕೆ ಸೇರದಿರತಕ್ಕಂಥ ಇಂಡಿಪೆಂಡೆಂಟ್ ಸದಸ್ಯರು ಇದ್ದಾರೆ, ಜನತಾ ಪಕ್ಷ ಮತ್ತು ಜನತಾ ದಳದ ಸದಸ್ಯರು ಇದ್ದಾರೆ. ಅವರೆಲ್ಲರನ್ನು ಅಧಿಕಾರಿಗಳನ್ನು ಹೊರಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಕೇಳಿದೆ. ನಿಮ್ಮ ಮೇಲೆ ಇಂಥ ಆಪಾದನೆ ಇದೆ. ಈ ವಿಚಾರದಲ್ಲಿ ಏನು ಮಾಡಬೇಕೆಂದು. ಆಗ ನಾನು ನನ್ನ ಅಭಿಪ್ರಾಯವನ್ನು ಅವರ ಮೇಲೆ ಹೇರಲು ಹೋಗಲಿಲ್ಲ; ಆದರೆ ತಿಳಿದುಕೊಳ್ಳುವುದಕ್ಕೆ ಕೇಳಿದೆ. ಏತಕ್ಕೆಂದರೆ ಅಂಥ ಸಂಸ್ಥೆಗಳಲ್ಲಿ ಕೆಲಸ ಮಾಡಿದವನಲ್ಲ, ಆದರೆ ನನಗೆ ಅನುಭವ ಸಾಕಷ್ಟು ಇದೆ. ಅದರ ಆಧಾರದ ಮೇಲೆ ಕೇಳಿದೆ. ಅದಕ್ಕೆ ಎಲ್ಲರೂ ಒಮ್ಮತದಿಂದ ಮತ್ತು ಒಕ್ಕೂರಲಿನಿಂದ ಹೇಳಿದರು. ಈಗಿರತಕ್ಕಂಥ ಶಾಸನ ಸರಿಯಾಗಿದೆ ಎಂದು ಹೇಳಿದ್ದಾರೆ. ಈ ಅಭಿಪ್ರಾಯ ತಪ್ಪಿರಲಾರದು. ಆದ್ದರಿಂದ ನಾನು ತಮ್ಮಲ್ಲಿ ಏನು ಹೇಳುತ್ತೇನೆಂದರೆ ಈ ಬಿಲ್ಲನ್ನು ಅವಸರವಾಗಿ ಬದಲಾವಣೆ ಮಾಡುವುದರ ಬದಲು public opinion elicit ಮಾಡೋಣ. 15 ದಿವಸಗಳಲ್ಲಿ, ಒಂದು ವಾರದಲ್ಲಿ ಏನಾಗುತ್ತದೆ. ಈ ಅಧಿವೇಶನ 30ನೇ ತಾರೀಖಿಗೆ ಮುಗಿಯುತ್ತದೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಈಗಾಗಲೇ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದಾರೆ. ಇವತ್ತು ಸೇರಿದ್ದೇವೆ, ಇನ್ನು ಎರಡು ದಿವಸಗಳಲ್ಲಿ ಮಸೂದೆಯನ್ನು ಮಂಡನೆ ಮಾಡಿ ಪಾಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಥವಾ ಶಾಸನಸಭೆಯನ್ನು ಮುಂದಿನ ವಾರ ಸೇರಬೇಕೆಂದು ಸಲಹೆ ಸರ್ಕಾರದಿಂದ ಬಂದಿಲ್ಲ. ತಾವು ನಮ್ಮ ಮುಂದಿಟ್ಟಿಲ್ಲ. ಇವತ್ತು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ನಾಳೆ ಸಭೆಯಲ್ಲಿ ಮುಂದುವರಿಸಬೇಕೆಂದು ಹೇಳಿದರೆ. we should not be taken for granted. We have our own responsibilities and duties to be performed. ನಾನು ಮೊದಲನೆಯ ದಿವಸವೇ ಹೇಳಿದ್ದೇನೆ. ಇದನ್ನು ತರುವುದಾದರೆ ಶಾಸನ ಸಭೆ 30ನೇ ತಾರೀಖು ಮುಗಿಯುವುದಿದ್ದು ಅದರೊಳಗೆ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ದಯವಿಟ್ಟು ಇದನ್ನು ಮುಂಚಿತವಾಗಿಯೇ ತಿಳಿಸಿ ಎಂದು ತಮ್ಮ ಗಮನಕ್ಕೆ ತಂದಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಹೇಳಿದ್ದೇನೆ. ಆದರೆ ಇದು ಯಾವುದನ್ನೂ ಕೇಳದೆ ಶಾಸನವನ್ನು ತಂದಿದ್ದೀರಿ. ಆದಕ್ಕಾಗಿ ನಾನು ಹೇಳಿದೆ. ಶಾಸಕರಿಗಾಗಿ ಶಾಸನವೋ, ಜನಕ್ಕಾಗಿ ಶಾಸನವೋ ಎಂದು, ಮಾನ್ಯ ಮಂತ್ರಿಗಳಿಗೆ ಇದು ಪ್ರತಿಷ್ಠೆಯ ಪ್ರಶ್ನೆಯಾಗುವುದಾದರೆ ಆ ಮಾತು ಬೇರೆ. ಅಥವಾ ಹಿಂದಿನ ಸರ್ಕಾರ ಮಾಡಿತ್ತು ಎಂದು ಅದರ ಬಗ್ಗೆ ಸೇಡು ದ್ವೇಷ ತೀರಿಸಿಕೊಳ್ಳುವುದಾದರೆ ಅದಕ್ಕೆ ನಾನು ಹೋಗುವುದಿಲ್ಲ. ಆದರೆ ಇಂತಹ ಆಮೂಲಾಗ್ರವಾಗಿ ಬದಲಾವಣೆಯಾಗಿ ತರತಕ್ಕಂಥ ಈ ಮಸೂದೆ ಇಷ್ಟು ಬೇಗ ನಮ್ಮಲ್ಲಿ ಸಂಖ್ಯಾಬಲ ಇದೆ ಎಂದು ತೀರ್ಮಾನ ಮಾಡತಕ್ಕಂಥದ್ದು ಮುಂದೆ ಹಾನಿಗೆ ದಾರಿ ಆಗಬಹುದು. ಇವತ್ತು ಸಂಖ್ಯಾಬಲ ಇದ್ದು ಬೇರೆ ಬೇರೆ ರಾಜ್ಯಗಳಲ್ಲಿ ಏನೇನಾಗಿದೆ ಎನ್ನತಕ್ಕಂಥದ್ದು ತಾವು ತಿಳಿದುಕೊಳ್ಳಬೇಕು. ರಾಜ್ಯದಲ್ಲಿ ಏನಾಗಿದೆ ಎನ್ನುವುದನ್ನೂ ಕೂಡ ತಾವು ತಿಳಿದುಕೊಳ್ಳಬೇಕು. ಮೇಲಾಗಿ ಮಾನ್ಯ ಹನುಮೇಗೌಡರು ಹೇಳಿದ್ದು ಏನೆಂದರೆ ಚುನಾವಣೆಗೆ ಹೋಗಿದ್ದಾಗ ನಿಮ್ಮ ಗತಿ ಏನಾಯಿತೆಂದು? ಹಾಗಿದ್ದರೆ ಚುನಾವಣೆ ಪ್ರಣಾಳಿಕೆಯಲ್ಲಿ ಇವರು ಈ ಮಾತನ್ನು ಹೇಳಿದ್ದರೋ?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೇ ಚುನಾವಣಾ ಪ್ರಣಾಳಿಕೆಗಳು ಮತ್ತು ಜನ ಕೊಡತಕ್ಕಂಥ ಮ್ಯಾನ್‌ಡೇಟರಿ ಎಷ್ಟು ಅಪ್ರಕೃತ ಎಷ್ಟು ಇರ್‌ಲೆವೆಂಟ್ ಆಗುತ್ತಿವೆ ಎನ್ನತಕ್ಕಂಥದ್ದನ್ನು ಅನುಭವದಿಂದ ತಿಳಿಯಬಹುದಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆದರೆ ಸದಸ್ಯರು ಚುನಾವಣೆಯಿಂದ ಗೆದ್ದು ಬಂದಿದ್ದೇವೆ ಶೇಕಡಾ

ಒಂದರಷ್ಟು ಕಳೆದ ಸಾರಿಗಿಂತ ಹೆಚ್ಚು ಮತ ತೆಗೆದುಕೊಂಡು ಭಂದು, ಚುನಾವಣೆಯಲ್ಲಿ ಗೆದ್ದುಬಂದಿದ್ದೇವೆಂದು ಹೇಳಿ ಜನರಿಗೆ ಜಿಲ್ಲಾಪರಿಷತ್ ಮಸೂದೆಯನ್ನು ಇಲ್ಲಿ ಅಮೆಂಡ್‌ಮೆಂಟ್ ಮಾಡುತ್ತೇವೆಂದು ಹೇಳಿದೆ, ಮೋಸ ಮಾಡತಕ್ಕಂಥ ಈ ಪ್ರವೃತ್ತಿ ಏನು ಇದೆ ಇದನ್ನು ನಾನು ಪ್ರತಿಭಟಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ ನಾನು ಅದರ ವಿವರಕ್ಕೆ ಈಗ ಹೋಗುವುದಿಲ್ಲ. ಏತಕ್ಕೆಂದರೆ 64ನೇ ಶಾಸನ, ಆ ತಿದ್ದುಪಡಿ ಮಸೂದೆ ಯಾರು ತಂದವರು; ಏತಕ್ಕೆ ತಂದರು, ಅದರಲ್ಲಿ ಏನು ಅಂಶಗಳು ಒಳಪಟ್ಟಿತ್ತು, ಚನಾವಣೆಯ ಕಾಲದಲ್ಲಿ ಕಾಂಗ್ರೆಸ್‌ನ ಪ್ರಮುಖರು ಇಲ್ಲಿ ಬಂದು ಭಾಷಣ ಮಾಡಿದಾಗ ಈ ವಿಚಾರದಲ್ಲಿ ಏನು ಹೇಳಿದ್ದಾರೆ, ಅದೆಲ್ಲ ಮಾಹಿತಿಗಳನ್ನು ಸಂಗ್ರಹಿಸಿಟ್ಟಿದ್ದೇನೆ. ಮುಂದೆ ವಿವರವಾಗಿ ಹೇಳುತ್ತೇನೆ. ಆದರೆ ತತ್‌ಕ್ಷಣ ಇರತಕ್ಕಂಥ ಈ ಒಂದು ತಿದ್ದುಪಡಿಯನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ರಾಜ್ಯಾಂಗದ 64ನೇ ವಿಧಿಯನ್ನು ಅಮೆಂಡ್ ಮಾಡುವುದಕ್ಕಾಗಿ ತಂದಂಥ ಶಾಸನಕ್ಕೆ ಅನುಗುಣವಾಗಿದೆಯೇ? ಆ ಕಾರಣದಿಂದ ಈ ಮಸೂದೆಯನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುವುದಕ್ಕೆ ತಾವು ಅನುಮತಿ ಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ನಮ್ಮನ್ನು ಅವರು ಇಷ್ಟೊಂದು ಲಘುವಾಗಿ ತೆಗೆದುಕೊಳ್ಳತಕ್ಕದ್ದು ಸಲ್ಲದು. ಜನತಂತ್ರ ಶಾಶ್ವತವಾಗಿರಬೇಕು. ಅವರಲ್ಲಿ ಸಂಖ್ಯೆ ಇರಬಹುದು, ಅದು ಶಾಶ್ವತ ಅಲ್ಲ. ರಾಜಕೀಯ ವ್ಯವಸ್ಥೆ ದಿನೇದಿನೇ ಹದಗೆಡುತ್ತಿದೆ. ನಿಮ್ಮ ಅಭಿಪ್ರಾಯವನ್ನು ಸಂಗ್ರಹಿಸುವಾಗ ನೀವು ಕೊಟ್ಟ ಮಾತೇನು? ಪ್ರತಿ ಪಕ್ಷದ ಮುಖಂಡರನ್ನು ಕರೆದು ಎಷ್ಟು ಸ್ವಾಮ್ಯ ಬರುತ್ತದೋ ಅಷ್ಟನ್ನು ಪೂರೈಸೋಣ, ಉಳಿದದ್ದನ್ನು ಶಾಸನ ಸಭೆಯಲ್ಲಿ ಚರ್ಚೆಸೋಣ ಎಂಬ ಮಾತನ್ನು ನೀವೂ ಹೇಳಿದ್ದಿರಿ, ನಿಮ್ಮ ಹಿಂದಿನ ಮಂತ್ರಿಗಳು ಹೇಳಿದ್ದರು. ಬೇಸಿಕ್ ಇಷ್ಯೂವನ್ನು ತೆಗೆದು ರಾಜ್ಯಾಂಗದತ್ತವಾಗಿ ಶಾಸನಸಭೆಗೆ ಅಧಿಕಾರವನ್ನು ವರ್ಗಾಯಿಸತಕ್ಕ ಅಧಿಕಾರವೇ ಇಲ್ಲವೆಂದು ಹೇಳಿದಿರಿ. ನಾನು ಅದಕ್ಕೆ ಹೋಗುವುದಿಲ್ಲ. ಇಲ್ಲಿ ಈ ಶಾಸನಸಭೆಯಲ್ಲಿ ಮಸೂದೆಯನ್ನು ಮಂಡನೆ ಮಾಡಿ ನಂತರ ಅದು ರಾಜ್ಯಪಾಲರಿಗೆ ಹೋಗಿ, ಕೇಂದ್ರ ಸರ್ಕಾರಕ್ಕೆ ಹೋಗಿ ಕೇಂದ್ರ ಸರ್ಕಾರದ ಕಾನೂನು ಪಂಡಿತರೆಲ್ಲಾ ತಮ್ಮ ವ್ಯಾಖ್ಯಾನ ಮಾಡಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆದಂತಹ ಮಸೂದೆ ರಾಜ್ಯಾಂಗಬದ್ಧವಾಗಿ ಇಲ್ಲವೆಂದು ಹೇಳುವುದಾದರೆ, ಇವರೆಲ್ಲರಿಗಿಂತ ತಾವು ಬುದ್ಧಿವಂತರು ಎಂದರೆ ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ, ಇಷ್ಟೊಂದು ಅವಸರವಾಗಿ ಮಸೂದೆಯನ್ನು ತರತಕ್ಕದ್ದು ಯೋಗ್ಯ ಅಲ್ಲ. ಇಡೀ ದೇಶದಲ್ಲಿ 55 ಸಾವಿರ ಜನ ಚುನಾಯಿತ ಪ್ರತಿನಿಧಿಗಳಿದ್ದಾರೆ. ನಮ್ಮದು ಇದು ಒಂದೇ ಸಭೆಯಲ್ಲ. 224 ಜನರು ಕುಳಿತು ತೀರ್ಮಾನಿಸುವುದಕ್ಕಾಗುವುದಿಲ್ಲ. 55 ಸಾವಿರ ಜನ ಪ್ರತಿನಿಧಿಗಳು ಏನಿದ್ದಾರೆ, ಅವರು ಪ್ರತಿಯೊಂದು ಪಕ್ಷಕ್ಕೆ ಸೇರಿದವರು ಇದ್ದಾರೆ. ಅವರ ಅಭಿಪ್ರಾಯವನ್ನು ಕೇಳೋಣ. ಆದುದರಿಂದ ಮಾನ್ಯ ಮಂತ್ರಿಗಳಿಗೆ ಮನವಿ ಮಾಡುತ್ತೇನೆ, ಇಷ್ಟೊಂದು ಅವಸರ ಬೇಡ, ಅಗತ್ಯ ಇದ್ದರೆ. ಯಾವುದನ್ನು ಒಪ್ಪಿಕೊಳ್ಳಬಹುದೋ ಅದನ್ನು ಒಪ್ಪುವುದಕ್ಕೆ ನಾವು ಸಿದ್ಧರಾಗಿದ್ದೇವೆ. ನಾವು ವಿರೋಧಕ್ಕಾಗಿ ವಿರೋಧ ಮಾಡುತ್ತಿಲ್ಲ. ತಾವು ದಯವಿಟ್ಟು ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಈಗ ನಾವು ಇದನ್ನು ಅವಸರ ಅವಸರವಾಗಿ ಏನೂ ತಂದಿಲ್ಲ. ಮೊದಲೇ ಸುದೀರ್ಘವಾಗಿ ಆಲೋಚನೆ ಮಾಡಿ ತಂದಿದ್ದೇನೆ. 11 ತಿಂಗಳ ಕಾಲ ಯೋಚಿಸಿದ್ದೇವೆ. ನಿಮಗೆ ಈ ಒಂದು ಶಾಸನದಿಂದ ಅಕಸ್ಮಾತ್ ಪ್ರಯೋಜನವಾಗಿದ್ದರೆ ನಾನೂ ಸಹ ಸಂತೋಷ ಪಡುತ್ತಿದ್ದೆ. ಆದರೆ ಈ ಶಾಸನ ನಿಮ್ಮ ಪಕ್ಷಕ್ಕೆ ವಿರುದ್ಧವಾಗಿರುವುದನ್ನು ನಾವು ನೋಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಂದರೆ ನಿಮಗೆ ಅನುಕೂಲವಾಗುತ್ತದೆಂದು ತಿದ್ದುಪಡಿ ತಂದಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ : ನಮ್ಮ ಅನುಕೂಲಕ್ಕೆ ನಾವು ತಂದೆವು. ನಮ್ಮ ಪಾರ್ಟಿಯ ಅನುಕೂಲಕ್ಕೆ ನಾವು ತಂದೆವು. ಅದಕ್ಕೋಸ್ಕರ ಮಾನ್ಯ ಸದಸ್ಯರು ...

ಶ್ರೀ ಬಿ.ಹೆಚ್. ಬನ್ನೀಕೋಡ್ : ಕಾನೂನು ತರುವುದು ಪಕ್ಷದ ಹಿತಕ್ಕಾಗಿ ಅಲ್ಲ, ಜನರ ಹಿತಕ್ಕಾಗಿ ತರಬೇಕು.

(ಗೊಂದಲ)

2 : 1990ನೇ ಕರ್ನಾಟಕ ಜಿಲ್ಲಾಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ,